Language and Literacy

# Language, literacy and citizenship

# ಭಾಷೆ, ಸಾಕ್ಷರತೆ ಹಾಗೂ ಪೌರತ್ವ





Teacher Education through School-based Support in India
www.TESS-India.edu.in

http://creativecommons.org/licenses/

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF 2005) ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2009)ಗಳು ಭಾರತದಲ್ಲಿನ ಶಿಕ್ಷಣಕ್ಕಾಗಿ ಮಹಾದಾಸೆಯ ದೃಷ್ಟಿಕೋನವನ್ನು ನೀಡಿವೆ. ಇದರಲ್ಲಿ ಎಲ್ಲಾ ಶಾಲೆಗಳು ಸದೃಢವಾದ ಕಲಿಕಾ ವಾತಾವರಣವನ್ನು ಒದಗಿಸುತ್ತವೆ. ಈ ದೃಷ್ಟಿ ಕೋನವನ್ನು ಸಾಕಾರಗೊಳಿಸಲು ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ಸಹಾಯ ಹಸ್ತ ನೀಡುವುದೇ ಟೆಸ್ - ಇಂಡಿಯಾOERನ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ಶಿಕ್ಷಕರನ್ನು ಗಳೆಂದು ಪರಿಗಣಿಸಿ ಅವರು 'ವಿದ್ಯಾರ್ಥಿ' ತಮ್ಮ ವೃತ್ತಿಯಲ್ಲಿ ಅವಶ್ಯಕವಿರುವ ಸಾಧನ ಹಾಗೂ ವಿಧಾನಗಳನ್ನು ಬೆಳೆಸಿಕೊಳ್ಳುವಲ್ಲಿ ನೈಪುಣ್ಯತೆಯನ್ನು ಹೊಂದುವಂತೆ, ಬೋಧನೆಯ ಮತ್ತು ಕಲಿಕೆಯ ವಿಧಾನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಾಯವಾಗುವಂತೆ ಸಂಪನ್ಮೂಲ ರಚಿಸಲಾಗಿದೆ. OER ಮುಖ್ಯ ಲಕ್ಷಣವೆಂದರೆ ಶಿಕ್ಷಕರು ಘಟಕಗಳನ್ನು, ವೈಯಕ್ತಿಕ ಚಟುವಟಿಕೆಗಳನ್ನು, ಕೇಸ್ ಸ್ಟಡಿಗಳನ್ನು ಬಳಸಿ, ಅವರ ವೃತ್ತಿ ಕೌಶಲ್ಯವನ್ನು ವೃದ್ಧಿಸಿಕೊಂಡು ಅವುಗಳನ್ನು ನೂತನ ಸಂದರ್ಭಗಳಿಗೆ ಮತ್ತು ವಿಷಯಗಳಿಗೆ ಅನ್ವಯಿಸುವುದು.

ಎಲ್ಲಾ ವಿಷಯಗಳಿಗೂ ಹಾಗೂ ಎಲ್ಲಾ ಹಂತಗಳಿಗೂ ಅನ್ವಯವಾಗುವ ಈ ಪ್ರಮುಖ ಸಂಪನ್ಮೂಲಗಳು, ಭಾರತದ ಶಿಕ್ಷಣ ನೀತಿ ಮತ್ತು ಟೆಸ್ ಇಂಡಿಯಾ OERನಲ್ಲಿನ ಮಾದರಿಯಂತೆ ಶಿಕ್ಷಕರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಮುಖ ವಿಧಾನಗಳ ಬಗ್ಗೆ ಮುಂದುವರಿದ ಪ್ರಾಯೋಗಿಕ ಸಲಹೆಗಳನ್ನು ನೀಡುತ್ತವೆ. ಟೆಸ್ ಇಂಡಿಯಾದ ಪ್ರಾಯೋಗಿಕ ತತ್ವಗಳನ್ನೊಳಗೊಂಡಂತೆ ವಿದ್ಯಾರ್ಥಿಗಳನ್ನು ಸಂಘಟಿಸುವ ವಿಧಾನಗಳು, ಕಲಿಕಾ ಚಟುವಟಿಕೆಗಳು ಮತ್ತು ಶಿಕ್ಷಕ-ವಿದ್ಯಾರ್ಥಿ ಮತ್ತು ವಿದ್ಯಾರ್ಥಿ ವಿದ್ಯಾರ್ಥಿಗಳ ನಡುವಿನ - ಒಡನಾಟವನ್ನು ಏರ್ಪಡಿಸುವ ವಿಧಾನಗಳನ್ನು ಒಳಗೊಂಡಿದೆ. ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ವೆಬ್‌ಸೈಟ್ ನಲ್ಲಿ ಈ ಪ್ರಮುಖ ಸಂಪನ್ಮೂಲಗಳು ಲಭ್ಯವಿದೆ.

**ವೀಡಿಯೋ ಸಂಪನ್ಮೂಲಗಳು**

ಟೆಸ್ ಇಂಡಿಯಾದವರು ತಯಾರಿಸಿದ ವೀಡಿಯೋ ಕ್ಲಿಪ್‌ಗಳ ಸಮೂಹವು ತರಗತಿಯಲ್ಲಿನ ಭಾಗವಹಿಸುವಿಕೆಯ ಪ್ರಮುಖ ತಂತ್ರಗಳನ್ನು ವಿವರಿಸುತ್ತವೆ. (ಪ್ರಮುಖ ಸಂಪನ್ಮೂಲಗಳ ವಿಷಯಗಳಿಗೆ ಸರಿಹೊಂದುವಂತೆ) ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸುವಿಕೆಯ ಅಭ್ಯಾಸಗಳನ್ನು ಭಾರತೀಯ ತರಗತಿಗಳಲ್ಲಿ ಬಳಸುವುದನ್ನು ಈ ಕ್ಲಿಪ್ ಗಳಲ್ಲಿ ನಾವು ಕಾಣಬಹುದಲ್ಲದೇ, ನಿರ್ದಿಷ್ಟ ಕ್ರಿಯೆಗಳನ್ನು ಹಾಗೂ ನಡತೆಗಳನ್ನು ವೀಕ್ಷಕರು ಗುರುತಿಸಲು ವೀಕ್ಷಕ ವಿವರಣೆಯನ್ನು ಕೇಳಬಹುದು. ಈ ವೀಡಿಯೋ ಕ್ಲಿಪ್‌ಗಳನ್ನು ಹಿಂದಿ ತರಗತಿಗಳಲ್ಲಿ ಚಿತ್ರೀಕರಿಸಿದ್ದು, ವಿವಿಧ ರಾಜ್ಯಗಳಿಗೆ ಅನುಗುಣವಾಗಿ ವೀಕ್ಷಕ ವಿವರಣೆಯನ್ನು ಭಾಷಾಂತರಿಸಲಾಗಿದೆ. ಈ ವೀಡಿಯೋ ಕ್ಲಿಪ್‌ಗಳಿಗೆ ಲಿಂಕ್‌ಗಳನ್ನು ವೀಡಿಯೋ ಚಿತ್ರದ ಮೂಲಕ OERಗಳಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ತೋರಿಸಿದ್ದು, ಅಂತರ್ಜಾಲದ ಮೂಲಕ ಬಳಕೆದಾರರು ಇದನ್ನು ಬಳಸಬಹುದಾಗಿದೆ. ಈ ವೀಡಿಯೋ ಕ್ಲಿಪ್‌ಗಳನ್ನು ಟ್ಯಾಬ್ಲೆಟ್, ಪಿಸಿ, ಡಿ.ವಿ.ಡಿ, ಮೊಬೈಲ್ ಫೋನ್‌ಗಳಲ್ಲಿ ಹಾಗೂ ಎಸ್.ಡಿ ಕಾರ್ಡ್ ಮೂಲಕ ಬಳಸಲು ಬಳಕೆದಾರರು ಇವುಗಳನ್ನು ಡೌನ್‌ಲೋಡ್ ಮಾಡಬಹುದಾಗಿದೆ. (http://www.tess-india.edu.in/)

*Version 2.0    LL11TESSKNV1*
*Karnataka*

*Except for third party materials and otherwise stated, this content is made available under a Creative Commons Attribution-ShareAlike licence: http://creativecommons.org/licenses/by-sa/3.0/*

*TESS-India is led by The Open University UK and funded by UK aid from the UK government*

## ಈ ಘಟಕದಲ್ಲೇನಿದೆ?

ಈ ಘಟಕವು ಪೌರತ್ವ ಕುರಿತು ನಿರ್ದಿಷ್ಟ ವಿಷಯ ಕುರಿತಾದ ಯೋಜನಾ ಕಾರ್ಯ (thematic class project) ವೊಂದನ್ನು ಯೋಜಿಸಲು ಮಾರ್ಗದರ್ಶಿಯಾಗಿದೆ. ಶಾಲೆಯ ಒಳಗೆ ಹಾಗೂ ಹೊರಗೆ ನಿಮ್ಮ ವಿದ್ಯಾರ್ಥಿಗಳು ಚಿಂತನಾಶೀಲರಾಗಿ, ಒಳಗೊಳ್ಳುವವರಾಗಿ ಮತ್ತು ವಿವೇಚನಯಿಂದ ತೊಡಗಿಳ್ಳುವಂತಹ ಅರ್ಥಪೂರ್ಣ, ಸಂವಹನಾತ್ಮಕ ಸಹಸಂಬಂಧಿತ ಚಟುವಟಿಕೆಗಳ ಸರಣಿಗಳನ್ನು ಯೋಜಿಸಿ ಪರಿವೀಕ್ಷಿಸುವಿರಿ. ಇಂತಹ ಚಟುವಟಿಕೆಗಳನ್ನು ಯೋಜಿಸಿ ಪರಿವೀಕ್ಷಣೆ ಮಾಡುವ ರೀತಿಯನ್ನು ಈ ಘಟಕ ವಿವರಿಸುತ್ತದೆ.

## ಈ ಘಟಕದಲ್ಲಿ ನೀವೇನು ಕಲಿಯಬಹುದು?

- ನಿಮ್ಮ ವಿದ್ಯಾರ್ಥಿಗಳ ಪೌರತ್ವ ಕೌಶಲಗಳನ್ನು ಬೆಳೆಸುವ ನಿರ್ದಿಷ್ಟ ವಿಷಯ ಯೋಜನಾ ಕಾರ್ಯ (thematic project) ವನ್ನು ಯೋಜಿಸಿ, ವ್ಯವಸ್ಥೆಗೊಳಿಸುವುದು ಹೇಗೆ ಎಂಬುದರ ಬಗ್ಗೆ
- ಯೋಜನೆಯಲ್ಲಿ ಭಾಷೆ ಹಾಗೂ ಸಾಕ್ಷರತೆಯನ್ನು ಆಧರಿಸಿದ ವಿವಿಧ ರೀತಿಯ ಚಟುವಟಿಕೆಗಳನ್ನು ಸೇರಿಸುವ ಅವಕಾಶಗಳನ್ನು ಗುರುತಿಸುವುದು ಹೇಗೆ ಎಂಬುದರ ಬಗ್ಗೆ
- ಭಾಷೆ, ಸಾಕ್ಷರತೆ ಹಾಗೂ ಪೌರತ್ವ ಕುರಿತಂತೆ ನಿಮ್ಮ ವಿದ್ಯಾರ್ಥಿಗಳ ಕಲಿಕೆಯನ್ನು ಪರಿವೀಕ್ಷಣೆ (monitor) ಮಾಡುವುದು ಹೇಗೆ ಎಂಬುದರ ಬಗ್ಗೆ

## ಈ ಮಾರ್ಗ ಏಕೆ ಮುಖ್ಯ?

ನಿರ್ದಿಷ್ಟ ವಿಷಯ ಯೋಜನಾ ಕಾರ್ಯವು ನಿಮ್ಮ ವಿದ್ಯಾರ್ಥಿಗಳಿಗೆ ಆ ವಿಷಯವನ್ನು ಪರಿಶೋಧನೆ ಮಾಡಲು ಅವಕಾಶ ಮಾಡಿಕೊಡುತ್ತದೆ. ಇದು

- ಅವರಿಗೆ ಆಸಕ್ತಿ ಹಾಗೂ ಪ್ರೇರಣೆಯನ್ನು ನೀಡುವುದು
- ವಿವಿಧ ವಿಷಯ ಕ್ಷೇತ್ರಗಳನ್ನು ಜತೆಗೂಡಿಸುತ್ತದೆ
- ಆಲಿಸುವ, ಮಾತನಾಡುವ, ಓದುವ ಹಾಗೂ ಬರೆಯುವ ಕೌಶಲಗಳನ್ನು ಜೊತೆಯಾಗಿ ಬಳಸುವ ಉದ್ದೇಶ ಪೂರ್ವಕ ಸಹಭಾಗಿತ್ವದ ಚಟುವಟಿಕೆಗಳಲ್ಲಿ ತೊಡಗಿಸುತ್ತದೆ.

ಯೋಜನಾಕಾರ್ಯಗಳು ಪಠ್ಯಕ್ರಮ ಹಾಗೂ ಪಠ್ಯಪುಸ್ತಕವನ್ನು ಕಲ್ಪನಾತ್ಮಕವಾಗಿ ಹಾಗೂ ಸ್ಮರಣೀಯವಾಗಿ ಇರುವಂತೆ ಮಾಡುವ ಮಾರ್ಗವಾಗಿವೆ. ಪೌರತ್ವ ಕುರಿತು ಕೇಂದ್ರಿತ ಯೋಜನಾ ಕಾರ್ಯಗಳು ವಿದ್ಯಾರ್ಥಿಗಳಿಗೆ ಅವರ ನಂಬಿಕೆಗಳು ಹಾಗೂ ವಿಚಾರಗಳಿಗೆ ಗೌರವವನ್ನು ಬೆಳೆಸಿಕೊಳ್ಳುವಂತೆ ಮಾಡುವುದರ ಜೊತೆಗೆ ಸಮಾಜದಲ್ಲಿನ ಮೌಲ್ಯಗಳು ಹಾಗೂ ಜವಾಬ್ದಾರಿಗಳ ಬಗ್ಗೆ ಅವರಲ್ಲಿ ತಿಳುವಳಿಕೆ ಮೂಡಿಸುತ್ತವೆ. ಈ ಯೋಜನಾ ಕಾರ್ಯಗಳು ಮಾನವನ ಹಕ್ಕು ಮತ್ತು ಕರ್ತವ್ಯಗಳು, ನ್ಯಾಯ, ಸ್ವಾತಂತ್ರ್ಯ ಹಾಗೂ ಸಮಾನತೆಗೆ ಸಂಬಂಧಿಸಿದ ವಿಶಾಲ ಬೋಧನಾ ಉದ್ದೇಶಗಳನ್ನು ಹೊಂದಿರಲು ಸಾಧ್ಯ. ಈ ರೀತಿ ವಿದ್ಯಾರ್ಥಿಗಳು ಶಾಲಾ ಕಲಿಕೆಗೂ ಅವರ ಜೀವನಕ್ಕೂ ಸಂಬಂಧಗಳನ್ನು ಕಲ್ಪಿಸಿಕೊಳ್ಳುತ್ತಾರೆ.

## 1 ಭಾಷೆ, ಸಾಕ್ಷರತೆ ಹಾಗೂ ಪೌರತ್ವದ ಬಗ್ಗೆ ಆಲೋಚಿಸುವುದು

### ಚಟುವಟಿಕೆ 1: ಭಾಷೆ, ಸಾಕ್ಷರತೆ ಹಾಗೂ ಪೌರತ್ವದ ಬಗ್ಗೆ ಆಲೋಚಿಸುವುದು

ಸಂಪನ್ಮೂಲ 1ನ್ನು ಸಹೋದ್ಯೋಗಿಯೊಬ್ಬರ ಜೊತೆಗೂಡಿ ಓದಿ. ನಿಮಗೆ ಈ ಸಂಪನ್ಮೂಲದ ಪರಿಚಯವಿರಬಹುದು. ಈಗಾಗಲೇ ಒಮ್ಮೆ ನೀವು ಓದಿದ್ದರೂ, ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯುತ್ತಾ ಮತ್ತೊಮ್ಮೆ ಓದಿ:

- ಉತ್ತಮ ಪೌರರಲ್ಲಿ ಕಂಡು ಬರುವ ವರ್ತನೆಗಳು ಯಾವುವು?
- ವಿದ್ಯಾರ್ಥಿಗಳು ಉತ್ತಮ ಪೌರರಾಗಲು ಶಾಲೆಗಳು ಅವರಿಗೆ ಯಾವ ರೀತಿಯ ಸಹಾಯ ಮಾಡಬಹುದು?
- ಭಾಷೆ ಹಾಗೂ ಸಾಕ್ಷರತೆಯ ಯಾವ ವಿಧಾನಗಳು ವಿದ್ಯಾರ್ಥಿಗಳಿಗೆ ಉತ್ತಮ ಪೌರರಾಗಲು ಸಹಾಯ ಮಾಡಬಲ್ಲವು?

ನಿಮ್ಮ ವಿಚಾರಗಳನ್ನು ಸಹೋದ್ಯೋಗಿಯೊಂದಿಗೆ ಚರ್ಚಿಸಿ.

ಈಗ ನಮ್ಮ ವಿಚಾರಗಳೊಂದಿಗೆ ಹೋಲಿಸಿ.

ಒಳ್ಳೆಯ ಪೌರರು:

- ತಮ್ಮ ಜ್ಞಾನ ಹಾಗೂ ಕೌಶಲಗಳನ್ನು ಸಮುದಾಯ ಹಾಗೂ ಪ್ರಪಂಚದ ಒಳಿತಿಗಾಗಿ ಉಪಯೋಗಿಸುತ್ತಾರೆ
- ತಮ್ಮ ಕಾಳಜಿಗಳನ್ನು ವ್ಯಕ್ತಪಡಿಸಲು ಹಾಗೂ ಪರಿಹಾರಗಳನ್ನು ಮುಂದಿಡಲು ಸಿದ್ಧರಿರುತ್ತಾರೆ
- ಆಲೋಚನಾಪರರು, ಎಲ್ಲರೊಂದಿಗೆ ಬೆರೆಯುವವರು ಹಾಗೂ ವಿಚಾರವಂತರಾಗಿರುತ್ತಾರೆ
- ತಮ್ಮ ನಂಬಿಕೆಗೆ ಅನುಗುಣವಾಗಿ ಕೆಲಸ ನಿರ್ವಹಿಸುತ್ತಾರೆ

ವಿದ್ಯಾರ್ಥಿಗಳು ಉತ್ತಮ ಪೌರರಾಗಲು ಕೆಳಗಿನಂತೆ ಹಲವಾರು ಅವಕಾಶಗಳನ್ನು ಒದಗಿಸುವ ಮೂಲಕ ಶಾಲೆಗಳು ಪ್ರಮುಖ ಪಾತ್ರವಹಿಸುತ್ತವೆ. ಶಾಲೆಯಲ್ಲಿ ವಿದ್ಯಾರ್ಥಿಗಳು:

- ಕ್ಲಿಷ್ಟ ವಿಚಾರಗಳನ್ನು ಅರ್ಥಮಾಡಿಕೊಂಡು, ವಿಶ್ಲೇಷಿಸುವುದು ಹೇಗೆ ಎಂಬುದನ್ನು ಕಲಿಯಬಹುದು
- ನ್ಯಾಯಸಮ್ಮತವಾದ ಹಾಗೂ ನೈತಿಕವಾದ ಪರಿಹಾರಗಳನ್ನು ಮುಂದಿಡುವ ಅವಕಾಶ ದೊರಕುವುದು
- ಇತರರ ಹೇಳುವುದನ್ನು ಕೇಳಿಸಿಕೊಳ್ಳುವ ಅವಕಾಶ ಸಿಗುವುದು
- ತಮ್ಮ ನಂಬಿಕೆಗಳು ಹಾಗೂ ಕಾಳಜಿಗಳನ್ನು ಗೌರವಯುತವಾಗಿ ವ್ಯಕ್ತಪಡಿಸುವ ಅವಕಾಶ ಸಿಗುವುದು
- ವಿವಿಧ ವ್ಯಕ್ತಿಗಳ ಗುಂಪಿನೊಂದಿಗೆ ಧನಾತ್ಮಕವಾಗಿ ಪ್ರತಿಕ್ರಯಿಸಲು ಅವಕಾಶ

ಭಾಷೆ ಹಾಗೂ ಸಾಕ್ಷರತೆಯ ಕೌಶಲಗಳು ವಿದ್ಯಾರ್ಥಿಗಳಿಗೆ ಉತ್ತಮ ನಾಗರೀಕರಾಗಲು ಕೆಳಗಿನಂತೆ ಸಮರ್ಥರಾಗಿಸುವ ಮೂಲಕ ಸಹಾಯ ಮಾಡಬಲ್ಲವು:

- ಮಾಹಿತಿಯನ್ನು ಚಿತ್ರ, ಮಾತು ಅಥವಾ ಬರಹ ರೂಪದಲ್ಲಿ - ಅರ್ಥ ಮಾಡಿಕೊಂಡು, ವಿಶ್ಲೇಷಿಸಿ, ಅರ್ಥೈಸಿಕೊಳ್ಳುವ ಸಾಮರ್ಥ್ಯ
- ವಾಸ್ತವಾಂಶಗಳನ್ನು ಅಭಿಪ್ರಾಯಗಳಿಂದ ಪ್ರತ್ಯೇಕಿಸುವ ಸಾಮರ್ಥ್ಯ
- ಮಾಹಿತಿಯನ್ನು ಸಂಗ್ರಹಿಸಲು ಹಾಗೂ ಮೌಲ್ಯಮಾಪನ ಮಾಡುವ ಸಾಮರ್ಥ್ಯ
- ವಿವರಿಸಲು, ಸಾರಾಂಶೀಕರಿಸಲು ಹಾಗೂ ಊಹಿಸುವ ಸಾಮರ್ಥ್ಯ
- ವಿಷಯಗಳನ್ನು ಚರ್ಚಿಸಲು, ಇತರರ ಅಭಿಪ್ರಾಯಗಳನ್ನು ಆಲಿಸಲು ಹಾಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಾಮರ್ಥ್ಯ
- ಆರೋಗ್ಯಕರ ಪ್ರತಿಕ್ರಿಯೆಗಳನ್ನು ಹೊರ ಹೊಮ್ಮಿಸುವ ಪ್ರಶ್ನೆಗಳನ್ನು ಕೇಳುವ ಸಾಮರ್ಥ್ಯ
- ಇತರರನ್ನು ಸರಿಯಾದ ರೀತಿಯಲ್ಲಿ ಪ್ರೇರೇಪಿಸುವ ಸಾಮರ್ಥ್ಯ
- ಭಿತ್ತಿಚಿತ್ರಗಳನ್ನು ತಯಾರಿಸಲು, ಪತ್ರಗಳನ್ನು ಬರೆಯಲು ಹಾಗೂ ಮನವಿಗಳನ್ನು ತಯಾರಿಸುವ ಸಾಮರ್ಥ್ಯ
- ಚಿತ್ರಗಳು, ಮಾತು ಹಾಗೂ ಬರಹದ ಮೂಲಕ ವಿಭಿನ್ನ ಸಭಿಕರಿಗೆ ಮಾಹಿತಿಯನ್ನು ಪ್ರಸ್ತುತಪಡಿಸುವ ಸಾಮರ್ಥ್ಯ

ಪೌರತ್ವದ ಹಲವಾರು ವಿಷಯಗಳು ಗಂಭೀರ ಸ್ವರೂಪದ್ದಾಗಿದ್ದರೂ ಅವುಗಳನ್ನು ಆನಂದದಿಂದ ತೊಡಗಿಕೊಂಡು ಪರಿಶೋಧನೆಯ ಮೂಲಕ ಅರಿತುಕೊಳ್ಳಲು ಸಾಧ್ಯವಿದೆ.

ಶಿಕ್ಷಕರೊಬ್ಬರು ಗ್ರಾಮ ಸಮುದಾಯವೊಂದರ ಬಗ್ಗೆ ತಮ್ಮ ತರಗತಿಯಲ್ಲಿ ಯೋಜನಾ ಕಾರ್ಯವೊಂದನ್ನು ಕೈಗೊಂಡುದುದರ ಕುರಿತು ಈಗ ನೀವು ಓದಲಿದ್ದೀರಿ. ಈ ಸಂದರ್ಭ ಅಧ್ಯಯನವನ್ನು ಓದುತ್ತಾ ಹೋದಂತೆ ವಿದ್ಯಾರ್ಥಿಗಳಲ್ಲಿ ಆಗುತ್ತಿದ್ದ ಭಾಷೆ ಹಾಗೂ ಸಾಕ್ಷರತೆಯ ಕೌಶಲಗಳ ಬರಳವಣಿಗೆ ಹಾಗೂ ಪೌರತ್ವದ ಅಂಶಗಳ ಬಗ್ಗೆ ಅವರಲ್ಲಿ ಉಂಟಾದ ಕಲಿಕೆಯನ್ನು ಕುರಿತು ಆಲೋಚಿಸಿ.

## ಸಂದರ್ಭ ಅಧ್ಯಯನ 1: ನಮ್ಮ ಗ್ರಾಮ ಸಮುದಾಯ

*ರೂಪಾರವರು ಕರ್ನಾಟಕದ ಗ್ರಾಮೀಣ ಶಾಲೆಯೊಂದರಲ್ಲಿ ಶಿಕ್ಷಕಿ. ಅವರು ತಮ್ಮ ಆರನೇ ತರಗತಿ ವಿದ್ಯಾರ್ಥಿಗಳಲ್ಲಿ ಸಮುದಾಯದ ಪರಿಕಲ್ಪನೆಯನ್ನು ಮೂಡಿಸುವ ತರಗತಿ ಯೋಜನಾ ಕಾರ್ಯವೊಂದರ ಭಾಗವಾಗಿ ಪಾಠಗಳ ಸರಣಿಯೊಂದನ್ನು ಬಳಸಿದ ಕುರಿತು*

*ವಿವರಿಸುತ್ತಾರೆ.*

ಪಾಠ 1: ನಮ್ಮ ಗ್ರಾಮ ಸಮುದಾಯ ಕುರಿತು ಆಲೋಚಿಸುವುದು

ನಮ್ಮ ಹಳ್ಳಿಯ ಸಮುದಾಯಕ್ಕೆ ಸೇರಿದ ಜನರು ಮತ್ತು ಜಾಗಗಳ ಕುರಿತು ಯೋಚಿಸುವಂತೆ ವಿದ್ಯಾರ್ಥಿಗಳಿಗೆ ಹೇಳಿ ಯೋಜನಾಕಾರ್ಯಕ್ಕೆ ಪೀಠಿಕೆ ಹಾಕಿದೆ. ಅವರ ಸಹಾಯಕ್ಕೆ ನಾನೇ ದೇವಸ್ಥಾನ, ಶಾಲೆ, ಪಂಚಾಯ್ತಿ ಕಾರ್ಯದರ್ಶಿ ಶಿವಪ್ಪ, ಹಾಲಿನ ಗೌರಮ್ಮ - ಇಂತಹ ಕೆಲವು ಉದಾಹರಣೆಗಳನ್ನು ನೀಡಿದೆ.

ನಂತರ ತಮ್ಮ ವಿಚಾರಗಳನ್ನು ಹಂಚಿಕೊಳ್ಳಲಿಕ್ಕಾಗಿ ವಿದ್ಯಾರ್ಥಿಗಳನ್ನು ನಾಲ್ಕು ಸದಸ್ಯರಿರುವ ಗುಂಪುಗಳನ್ನಾಗಿ ಸಂಘಟಿಸಿದೆ.

ಹದಿನೈದು ನಿಮಿಷಗಳ ನಂತರ ತರಗತಿಯಲ್ಲಿ ನಾನು ಓಡಾಡುತ್ತಾ, ಎಲ್ಲ ವಿದ್ಯಾರ್ಥಿಗಳಿಗೂ ತಮ್ಮ ಸಲಹೆಗಳನ್ನು ನೀಡಲು ಅವಕಾಶ ನೀಡಿದೆ. ಅವರಿಂದ ಪಡೆದ ಸಲಹೆಗಳನ್ನು ಕಪ್ಪುಹಲಗೆಯ ಮೇಲೆ ಬರೆಯುತ್ತಾ, ಸ್ಥಳಗಳು ಹಾಗೂ ವ್ಯಕ್ತಿಗಳನ್ನು ಪ್ರತ್ಯೇಕ ಕಾಲಂಗಳಲ್ಲಿ ಮಾಡುವುದೇ ಅಥವಾ ಎರಡೂ ಅಂಶಗಳನ್ನು ಒಟ್ಟಾಗಿ ಪಟ್ಟಿ ಮಾಡುವುದೇ ಎಂಬ ಬಗ್ಗೆ ನಾವು ಚರ್ಚಿಸಿದೆವು. ನಂತರ ಶಾಲೆಯ ಆವರಣದೊಳಗಿನ ಮೈದಾನದಲ್ಲಿ ಒಂದು ಸಮುದಾಯ ನಕ್ಷೆಯನ್ನು, ಅದರ ಲಕ್ಷಣಗಳನ್ನು ಗುರುತಿಸುವುದಕ್ಕಾಗಿ ಕಲ್ಲು, ಕಡ್ಡಿ, ಎಲೆ, ಕಾಳುಗಳು - ಹೀಗೆ ತಮಗೆ ಇಷ್ಟವಾದ ವಸ್ತುಗಳನ್ನು ಬಳಸಿ ರಚಿಸುವಂತೆ ತಿಳಿಸಿದೆ.

ತಮ್ಮ ಕೆಲಸವನ್ನು ಪೂರ್ಣಗೊಳಿಸಿದ ನಂತರ ಪ್ರತಿ ಗುಂಪಿನ ವಿದ್ಯಾರ್ಥಿಗಳು ಅದರ ಬಗ್ಗೆ ತರಗತಿಯಲ್ಲಿ ಎಲ್ಲರೊಂದಿಗೆ ಹಂಚಿಕೊಂಡರು. ತಾವು ಸೇರಿಸಿದ ಧಾರ್ಮಿಕ ಕೇಂದ್ರಗಳು, ಮಾರುಕಟ್ಟೆಗಳು, ಅಂಗಡಿಗಳು, ಹೊಲಗಳು, ಮನೆಗಳು ಹಾಗೂ ಕೆರೆ, ಬಾವಿ ಇತ್ಯಾದಿ ಮತ್ತು ಅದರೊಡನೆ ಸಂಬಂಧ ಉಳ್ಳ ಕೆಲವು ವ್ಯಕ್ತಿಗಳನ್ನು ಕುರಿತು ವಿವರಿಸಿದರು. ಇದು ಬಹಳ ಆಸಕ್ತಿದಾಯಕವಾಗಿತ್ತು. ನಕ್ಷೆಗಳು ಹಾಗೂ ವರ್ಣನೆಗಳು ವಿಭಿನ್ನವಾಗಿದ್ದವು. ಯೋಜನಾ ಕಾರ್ಯದ ದಾಖಲೀಕರಣಕ್ಕಾಗಿ ಅವರು ತಯಾರಿಸಿದ ನಕ್ಷೆಗಳ ಛಾಯಾ ಚಿತ್ರಗಳನ್ನು ನನ್ನ ಮೊಬೈಲ್ ಫೋನನ್ನು ಬಳಸಿ ತೆಗೆದೆ . (Adapted from Malone, 2010)




**ಚಿತ್ರ 1** ಸಮುದಾಯ ನಕ್ಷೆಯೊಂದರ ಉದಾಹರಣೆ

ಪಾಠ 2: ಸಮುದಾಯದಲ್ಲಿ ಒಟ್ಟಾಗಿ ಬಾಳುವುದು

ಇದಾದ ಮುಂದಿನ ವಾರದಲ್ಲಿ, ಸಮುದಾಯದಲ್ಲಿ ಒಟ್ಟಾಗಿ ಬಾಳುವುದು ಎಂದರೇನರ್ಥ ಎನ್ನುವುದನ್ನು ವಿವರಿಸಿದೆ. ನನ್ನ ವಿದ್ಯಾರ್ಥಿಗಳು ತರಗತಿಯ ಎಲ್ಲ ಸಹಪಾಠಿಗಳೊಂದಿಗೆ ಬೆರೆತು ಕಲಿಯುವುದನ್ನು ಪ್ರೋತ್ಸಾಹಿಸಲು ಗುಂಪುಗಳನ್ನು ಪುನಃ ಸಂಘಟಿಸಿದೆ - ಹಿಂದಿನ ಕಾರ್ಯದ ಗುಂಪೇ ಬೇರೆ ಇತ್ತು, ಇದ್ದರದ್ದೇ ಬೇರೆ ಇತ್ತು.

ಪ್ರಶ್ನೆಯೊಂದನ್ನು ಬರೆದ ದೊಡ್ಡ ಕಾಗದವನ್ನು ಪ್ರತಿ ಗುಂಪಿಗೆ ನೀಡಿದೆ. ನಾನು ಅವರಿಗೆ ನೀಡಿದ ಕೆಲವು ಪ್ರಶ್ನೆಗಳೆಂದರೆ:

1. ನಮ್ಮ ಸಮುದಾಯದಲ್ಲಿ ಮಕ್ಕಳೆಲ್ಲ ಕೂಡಿ ಯಾವ ಕೆಲಸ ಮಾಡುತ್ತಾರೆ?
2. ನಮ್ಮ ಸಮುದಾಯದಲ್ಲಿ ಹೆಂಗಸರೆಲ್ಲ ಕೂಡಿ ಯಾವ ಕೆಲಸಗಳನ್ನು ಮಾಡುತ್ತಾರೆ?

3. ನಮ್ಮ ಸಮುದಾಯದಲ್ಲಿ ಗಂಡಸರೆಲ್ಲ ಕೂಡಿ ಯಾವ ಕೆಲಸಗಳನ್ನು ಮಾಡುತ್ತಾರೆ?
4. ನಮ್ಮ ಸಮುದಾಯದಲ್ಲಿ ಯಾವ ಕೆಲಸಗಳನ್ನು ಗಂಡಸರು, ಹೆಂಗಸರು ಹಾಗೂ ಮಕ್ಕಳು ಎಲ್ಲರೂ ಸೇರಿ ಮಾಡುತ್ತಾರೆ?
5. ಅನಾರೋಗ್ಯಕ್ಕೆ ಒಳಗಾದವರಿಗೆ ನಮ್ಮ ಸಮುದಾಯದ ಜನರು ಹೇಗೆ ಸಹಾಯ ಮಾಡುತ್ತಾರೆ?
6. ನಮ್ಮ ಸಮುದಾಯದಲ್ಲಿ ಯಾರಾದರೂ ಸತ್ತಾಗ ಏನು ಮಾಡುತ್ತೇವೆ?

ಪ್ರತಿ ಗುಂಪಿಗೆ ನೀಡಲಾದ ಪ್ರಶ್ನೆಯನ್ನು ಕುರಿತು 20 ನಿಮಿಷಗಳು ಚರ್ಚಿಸುವಂತೆ, ನಂತರ ತಮ್ಮ ವಿಚಾರಗಳನ್ನು, ಟಿಪ್ಪಣಿ ಹಾಗೂ ಚಿತ್ರವೊಂದರ ಮೂಲಕ ವಿವರಿಸುವಂತೆ ತಿಳಿಸಿದೆ.

ಪ್ರತಿ ಗುಂಪು ತನ್ನ ಕೆಲಸ ಮುಗಿಸುತ್ತಿದ್ದಂತೆ ಅವರ ಬರಹವನ್ನು ಗೋಡೆಗೆ ಅಂಟಿಸಿದೆ. ಗುಂಪಿನಿಂದ ಯಾರಾದರೊಬ್ಬರು ತಮ್ಮ ವಿಚಾರಗಳನ್ನು ತರಗತಿಯೊಂದಿಗೆ ಹಂಚಿಕೊಳ್ಳುವಂತೆ ತಿಳಿಸಿದೆ. ಇದು ಬಹಳ ಆಸಕ್ತಿದಾಯಕವಾದ ಚರ್ಚೆಯನ್ನುಹುಟ್ಟುಹಾಕಿತು. ಇದರಿಂದಾಗಿ ದೊಡ್ಡ ಸಮುದಾಯದೊಳಗಿನ ಉಪ-ಸಮುದಾಯಗಳ ಕುರಿತು, ಇಂತಹ ಉಪ-ಸಮುದಾಯಗಳು ಮಾಡುವ ಕಾರ್ಯಗಳ ಕುರಿತು ಮಾಹಿತಿ ದೊರೆಯಿತು.

ಪಾಠ 3: ಸಮುದಾಯ ಜೀವನದ ಅನುಕೂಲ ಹಾಗೂ ಅನಾನುಕೂಲಗಳು

ವಿದ್ಯಾರ್ಥಿಗಳಿಗೆ ಕೆಳಗಿನ ಪ್ರಶ್ನೆಗಳನ್ನು ನೀಡಿ, ಉತ್ತರಗಳನ್ನು ಬರೆಯುವಂತೆ ಮನೆಕೆಲಸ ನೀಡಿದೆ.

- ಸಮುದಾಯವೊಂದರಲ್ಲಿ ಜೀವಿಸುವುದರಿಂದ ಅನುಕೂಲಗಳು ಯಾವುವು?
- ಅನಾನುಕೂಲಗಳು ಯಾವುವು?
- ಸಮುದಾಯವೊಂದರಲ್ಲಿ ತನ್ನನ್ನು ಪ್ರತ್ಯೇಕಿಸಲಾಗಿದೆ ಎಂದು ಭಾವಿಸುವ ವ್ಯಕ್ತಿಗೆ ಎಲ್ಲರ ಜೊತೆಯಲ್ಲಿ ಬಾಳಲು ಹೇಗೆ ಸಹಾಯ ಮಾಡಬಹುದು?

ಮಾರನೆಯ ದಿನ ನನ್ನ ವಿದ್ಯಾರ್ಥಿಗಳನ್ನು ಜೋಡಿಯಲ್ಲಿ (Pair) ಕುಳಿತುಕೊಳ್ಳುವಂತೆ ವ್ಯವಸ್ಥೆ ಮಾಡಿ, ತಮ್ಮ ಮನೆ ಕೆಲಸವನ್ನು ಪರಸ್ಪರ ಚರ್ಚಿಸುವಂತೆ ತಿಳಿಸಿದೆ. ನಂತರ ಇಡೀ ತರಗತಿ ಚರ್ಚೆಗೆ ಅವಕಾಶ ಕೊಟ್ಟು, ಈವರೆಗೆ ಮಾತನಾಡದೇ ಇದ್ದ ವಿದ್ಯಾರ್ಥಿಗಳಿಗೆ ಅವಕಾಶ ಸಿಗುವಂತೆ ಗಮನಹರಿಸಿದೆ.



**ಚಿತ್ರ 2** ತರಗತಿಯಲ್ಲಿ ಜೋಡಿಕಾರ್ಯ

ಪಾಠ 4: ಸಮುದಾಯ ಸರ್ಕಾರ

ಈ ಪಾಠವನ್ನು ನಾವು, ಗ್ರಾಮದಲ್ಲಿ ಜವಾಬ್ದಾರಿಯುತ ಸ್ಥಾನಗಳನ್ನು ಹೊಂದಿದ ಎಲ್ಲಾ ವ್ಯಕ್ತಿಗಳನ್ನು, ಅವರ ಜವಾಬ್ದಾರಿ-ಗಳೇನೆಂಬುದನ್ನು ಗಮನದಲ್ಲಿಟ್ಟುಕೊಂಡು ಪಟ್ಟಿ ಮಾಡುವ ಮೂಲಕ ಆರಂಭಿಸಿದೆವು.

ವಿದ್ಯಾರ್ಥಿಗಳ ವಿಚಾರಗಳನ್ನು ಕಪ್ಪು ಹಲಗೆಯ ಮೇಲೆ ನಾನೇ ಬರೆಯುವ ಬದಲು, ವಿದ್ಯಾರ್ಥಿಗಳು ಸ್ವಇಚ್ಛೆಯಿಂದ, ಒಬ್ಬರ ನಂತರ ಮತ್ತೊಬ್ಬರು ಬಂದು ಬರೆಯುವಂತೆ ಪ್ರೋತ್ಸಾಹಿಸಿದೆ. ಅವರು ಈ ಕಾರ್ಯವನ್ನು ಮಾಡಲು ಹೆಮ್ಮೆ ಪಟ್ಟರು ಹಾಗೂ ಅಂದವಾಗಿ ಬರೆಯಲು ಪ್ರಯತ್ನಿಸಿದರು. ಕಾಗುಣಿತದ ತಪ್ಪುಗಳನ್ನು ಮಾಡಿದಾಗ ಸರಿಪಡಿಸಿಕೊಳ್ಳುವಂತೆ ಅವರ ಸಹಪಾಠಿಗಳು ಸಲಹೆ ನೀಡಿದರು.

ನಂತರ ತರಗತಿಯ ವಿದ್ಯಾರ್ಥಿಗಳನ್ನು ಜೋಡಿಗಳಾಗಿ ವಿಭಜಿಸಿದೆ ಮತ್ತು ಇನ್ನೆರಡು ಪ್ರಶ್ನೆಗಳನ್ನು ಕುರಿತು ಚರ್ಚಿಸಲು 15 ನಿಮಿಷಗಳನ್ನು ನೀಡಿದೆ:

- ನಮ್ಮ ಸಮುದಾಯದಲ್ಲಿ ಜನರು ಸಹಕಾರದಿಂದ ಬಾಳುವಂತೆ ನೋಡಿಕೊಳ್ಳುವುದು ಯಾರ ಜವಾಬ್ದಾರಿಯಾಗಿದೆ?
- ಜನರು ಯಾವುದಾದರೂ ವಿಚಾರವನ್ನು ಒಪ್ಪದಿದ್ದಾಗ ಏನಾಗುತ್ತದೆ? ಅವರ ಅಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಲು ಯಾರು

ಸಹಾಯ ಮಾಡುತ್ತಾರೆ?

ನಂತರ ಇಡೀ ತರಗತಿಯಲ್ಲಿ ಚರ್ಚೆ ನಡೆದು, ಸಮುದಾಯದ ಆಸಕ್ತಿಗಳನ್ನು ಕಾಯುವ ವ್ಯವಸ್ಥೆಯಾಗಿ ಸ್ಥಳೀಯ ಸರ್ಕಾರದ ಪರಿಕಲ್ಪನೆ, ನಮ್ಮ ಗ್ರಾಮದಲ್ಲಿ ಈ ವ್ಯವಸ್ಥೆ ಇರುವ ರೀತಿ, ಇಂತಹ ಜವಾಬ್ದಾರಿಗಳನ್ನು ಸಮುದಾಯದ ಸದಸ್ಯರು ನಿರ್ವಹಿಸಿದ ರೀತಿಯನ್ನು ಕುರಿತು ಮಾತನಾಡಿದೆವು.

ನನ್ನ ವಿದ್ಯಾರ್ಥಿಗಳು ತಮ್ಮ ಸಮುದಾಯಕ್ಕಾಗಿ ತಾವು ಸಕ್ರಿಯವಾಗಿ ನೀಡಬಹುದಾದ ಕೊಡುಗೆಯ ಕುರಿತು ಆಲೋಚಿಸಲು ಪ್ರೋತ್ಸಾಹಿಸಿದೆ. ಪ್ರತಿ ವಿದ್ಯಾರ್ಥಿಗೆ ಒಂದು ಕಾಗದ_ ನೀಡಿದೆ. ಅದರಲ್ಲಿ ಪ್ರತಿಯೊಬ್ಬರು ಒಂದು ವಾಕ್ಯವನ್ನು ಬರೆದರು.ಅವರು ಇಷ್ಟ ಪಟ್ಟಲ್ಲಿ ವಿವರಿಸಬಹುದಾಗಿತ್ತು.  ವಿದ್ಯಾರ್ಥಿಗಳು ಬರೆದ ವಾಕ್ಯವನ್ನು ತರಗತಿಯಲ್ಲಿ ಎಲ್ಲರೂ ನೋಡಲು ಸಾಧ್ಯವಾಗುವಂತೆ ಗೋಡೆಗೆ ಅಂಟಿಸಿದೆ.

ಪ್ರಾರಂಭದಲ್ಲಿ, ನನ್ನ ವಿದ್ಯಾರ್ಥಿಗಳು ತಮ್ಮ ಸ್ಥಳೀಯ ಸಮುದಾಯದ ಯೋಜನಾ ಕಾರ್ಯದಲ್ಲಿ ತೊಡಗಿಕೊಳ್ಳುವರೇ ಎನ್ನುವುದರ ಬಗ್ಗೆ ನನಗೆ ಸ್ವಲ್ಪ ಆತಂಕವಿತ್ತು. ಆದರೆ ಆ ಆತಂಕ ಬೇಗನೆ ನಿವಾರಣೆಯಾಯಿತು. ಈ ವಿಷಯ, ಹಲವಾರು ಆಸಕ್ತಿದಾಯಕ, ಆಲೋಚನಾದಾಯಕ ವಿಚಾರಗಳಿಗೆ ತಳಹದಿಯಾಯಿತು. ಸಾಮಾನ್ಯವಾಗಿ ಮೌನವಾಗಿ ಇರುತ್ತಿದ್ದವರಿಂದಲೂ ಕೆಲವು ವಿಚಾರಗಳು ವ್ಯಕ್ತವಾದವು. ನಾಲ್ಕು ಪಾಠಗಳ ಉದ್ದಕ್ಕೂ ವಿದ್ಯಾರ್ಥಿ ಜೋಡಿಗಳ ನಡುವೆ ಹಾಗೂ ಗುಂಪುಗಳ ನಡುವೆ ಕಂಡು ಬಂದ ಗೌರವ ಹಾಗೂ ಸಹಭಾಗಿತ್ವ ನನಗೆ ಮೆಚ್ಚುಗೆಯಾಯಿತು.

**ಚಿಂತನೆಗೊಂದು ಕ್ಷಣ**

ಮೇಲಿನ ನಾಲ್ಕು ಪಾಠಗಳಿಗೆ ಸಂಬಂಧಿಸಿದಂತೆ ಕೆಳಗಿನ ಪ್ರಶ್ನೆಗಳನ್ನು ಕುರಿತು ಚಿಂತಿಸಿ:

- ಭಾಷೆ ಹಾಗೂ ಸಾಕ್ಷರತೆಯ ಯಾವ ಕೌಶಲಗಳನ್ನು ಶಿಕ್ಷಕಿ ರೂಪಾರವರ ವಿದ್ಯಾರ್ಥಿಗಳು ಬಳಸಿದರು?
- ಅವರ ವಿದ್ಯಾರ್ಥಿಗಳು ಪೌರತ್ವದ ಯಾವ ಅಂಶಗಳ ಕಲಿಕೆಯಲ್ಲಿ ತೊಡಗಿಕೊಂಡರು?
- ಪಾಠಗಳ ವಿಷಯವಸ್ತುವಿನ ಬಗ್ಗೆ ಅಚ್ಚರಿ ಮೂಡಿಸುವಂತಹದ್ದೇನಾದರೂ ಇದೆಯೇ?
- ನಿಮ್ಮ ತರಗತಿಯಲ್ಲಿ ಇಲ್ಲಿರುವುದು ಏನ್ನಾನದರೂ ನೀವು ಬಳಸಬಹುದೇ?

## 2 ಪೌರತ್ವ ಯೋಜನಾ ಕಾರ್ಯವನ್ನು ಯೋಜಿಸುವುದು

ಸಂದರ್ಭ ಅಧ್ಯಯನ 1ರಲ್ಲಿ ನೋಡಿದಂತೆ ಒಂದು ನಿರ್ದಿಷ್ಟ ವಿಷಯ ಯೋಜನಾ ಕಾರ್ಯ ಹಲವಾರು ಅವಧಿಗಳಲ್ಲಿ ಹಲವು ವಾರಗಳಲ್ಲಿ ವಿಸ್ತಾರವಾಗಿ ನಡೆಯುತ್ತದೆ . ನಿಮ್ಮ ತರಗತಿಯಲ್ಲಿ ಭಾಷೆ ಹಾಗೂ ಸಾಕ್ಷರತೆಯನ್ನು ಬೆಳೆಸುವ ಪೌರತ್ವ ಯೋಜನಾ ಕಾರ್ಯವೊಂದನ್ನು ಯೋಜಿಸಲು ಈ ಘಟಕದ ಇನ್ನುಳಿದ ಚಟುವಟಿಕೆಗಳು ಮಾರ್ಗದರ್ಶಿಯಾಗುವ ಉದ್ದೇಶವನ್ನು ಹೊಂದಿದೆ. ಚಟುವಟಿಕೆಯನ್ನು ಆರು ಭಾಗಗಳಾಗಿ (2 - 7ರವರೆಗಿನ ಚಟುವಟಿಕೆಗಳು) ವಿಭಜಿಸಲಾಗಿದೆ. ಪೂರ್ಣ ಚಟುವಟಿಕೆಯನ್ನು ಮೊದಲು ಸೂಕ್ಷ್ಮವಾಗಿ ಓದಿ, ನಂತರ ನೀವು ಆಯ್ಕೆ ಮಾಡುವ ವಿಷಯಕ್ಕೆ ಅನುಗುಣವಾಗಿ ಕೆಲಸ ಮಾಡಲು ಪ್ರಾರಂಭಿಸಿ.

### ಚಟುವಟಿಕೆ 2: ಯೋಜನಾ ಕಾರ್ಯಕ್ಕಾಗಿ ವಿಷಯವೊಂದನ್ನು ಗುರುತಿಸುವುದು

ನಿಮ್ಮ ತರಗತಿಗಾಗಿ, ಪೌರತ್ವಕ್ಕೆ ಸಂಬಂಧಿಸಿದ ವಿಷಯಗಳನ್ನು ಸಹೋದ್ಯೋಗಿಯೊಬ್ಬರೊಂದಿಗೆ ಪಟ್ಟಿ ಮಾಡಿ. ನೀವು ತಯಾರಿಸುವ ಪಟ್ಟಿ ನಿಮ್ಮ ಶಾಲೆ ಹಾಗೂ ಸಮುದಾಯದ ಸಂದರ್ಭಕ್ಕೆ ಸರಿ ಹೊಂದುತ್ತದೆ. ಕೆಳಗಿರುವ ವಿಷಯಗಳನ್ನು ಸಲಹಾತ್ಮಕವಾಗಿ ಮಾತ್ರ ನೀಡಲಾಗಿದೆ:

- ಶಾಲೆಯನ್ನು ಮತ್ತಷ್ಟು ಆಕರ್ಷಣೀಯಗೊಳಿಸಲು ವಿಧಾನಗಳು
- ಹಳ್ಳಿಯನ್ನು ಸ್ವಚ್ಛವಾಗಿಡುವುದು
- ಹಳ್ಳಿಯಲ್ಲಿ ನವಜಾತ ಶಿಶುಗಳಿಗಾಗಿ ಹಾಗೂ ಹಿರಿಯ ನಾಗರೀಕರಿಗಾಗಿ ಕಂಬಳಿ (blankets)ಗಳನ್ನು ಸಂಗ್ರಹಿಸುವುದು
- ಸಮುದಾಯದಲ್ಲಿನ ಒಂಟಿಯಾಗಿರುವ, ವಿಕಲಚೇತನ ಹಾಗೂ ಅನಾರೋಗ್ಯ ಪೀಡಿತರಿಗೆ ಸಹಾಯ ಮಾಡುವುದು
- ಸ್ಥಳೀಯ ಉದ್ದೇಶಕ್ಕಾಗಿ ಹಣ ಸಂಗ್ರಹಣೆ ಮಾಡಲು ಕೆಲವು ವಸ್ತುಗಳ ಮಾರಾಟಕ್ಕೆ ವ್ಯವಸ್ಥೆ ಮಾಡುವುದು

- ಉಪಯೋಗಿಸದೇ ಇರುವ ಕಾಗದ, ಆಹಾರ ಹಾಗೂ ಮನೆ ಬಳಕೆ ವಸ್ತುಗಳ ಪುನರ್ಬಳಕೆ ಮಾಡುವಂತೆ ಕ್ರಮ ವಹಿಸುವುದು
- ಕಸ ಎಸೆಯುವುದು ಮುಂತಾದ ಸ್ಥಳೀಯ ಸಮಸ್ಯೆಗೆ ಸ್ಪಂದಿಸುವುದು
- ಶಕ್ತಿಯ ಉಳಿತಾಯ ಮಾಡುವುದು
- ಜಲ ಸಂರಕ್ಷಣೆ
- ನೀರಿನ ಮೂಲಕ ಹರಡುವ ರೋಗಗಳನ್ನು ತಡೆಯುವುದು
- ಹೆಣ್ಣು ಮಕ್ಕಳು ಮತ್ತು ಸ್ತ್ರೀಯರ ಆರೋಗ್ಯ ಕಾರ್ಯಕರ್ತೆಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಿಸುವುದು
- ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳು ಮನೆ ಕೆಲಸ ಹೆಚ್ಚು ಮಾಡಬೇಕಾಗಿರುವುದು - ಸ್ವಂತ್ರವಾಗಿ ಹೊರಗೆ ಆಡಲು ಹೆಣ್ಣು ಮಕ್ಕಳಿಗೆ ಸಾಧ್ಯವಾಗದೇ ಇರುವುದು
- ಪ್ರಾಣಿಗಳ ಬೇಟೆ ಮತ್ತು ಅವುಗಳನ್ನು ಅಳಿವಿನಂಚಿಗೆ ತಂದಿರುವ ಸಮಸ್ಯೆ
- ವರ್ತಮಾನ ಹಾಗೂ ಭವಿಷ್ಯದಲ್ಲಿ ಹವಾಮಾನ ಬದಲಾವಣೆಯ ಪ್ರಭಾವ
- ಸ್ಥಳೀಯ, ಅಲ್ಪಸಂಖ್ಯಾತ ಭಾಷೆಗಳ ಬಳಕೆಯನ್ನು ಉತ್ತೇಜಿಸುವುದು

ಪಟ್ಟಿಯಲ್ಲಿನ ಯಾವ ವಿಷಯಗಳು ನಿಮಗೆ ಹಾಗೂ ನಿಮ್ಮ ತರಗತಿಗೆ ಹೆಚ್ಚು ಸೂಕ್ತವಾಗಿದೆ?

ನಿಮ್ಮ ತೀರ್ಮಾನಕ್ಕಾಗಿ ಪರಿಗಣಿಸಬಹುದಾದ ಕೆಲವು ಅಂಶಗಳೆಂದರೆ:

- ವಿಷಯಗಳು ಎಲ್ಲ ವಿದ್ಯಾರ್ಥಿಗಳ ವಯಸ್ಸಿಗೆ ಅನುಗುಣವಾಗಿದೆಯೇ? ಅವರಿಗೆ ಸೂಕ್ತವಾಗಿದೆಯೇ ಹಾಗೂ ಆಸಕ್ತಿದಾಯಕವಾಗಿದೆಯೇ? ಎಂಬುದು
- ನಿಮ್ಮ ಶಾಲಾ ಪಠ್ಯಕ್ರಮದ ಅಂಶಗಳೊಂದಿಗೆ ಎಷ್ಟರ ಮಟ್ಟಿಗೆ ಹೊಂದಿಕೊಳ್ಳುತ್ತದೆ ಎಂಬುದು
- ಗಣಿತ, ಪರಿಸರ ಅಧ್ಯಯನ, ವಿಜ್ಞಾನ ಅಥವಾ ಸಮಾಜ ವಿಜ್ಞಾನದಂತಹ ವಿಷಯಗಳೊಂದಿಗೆ ಹೊಂದುತ್ತದೆಯೇ ಎಂಬುದು
- ವಿಷಯಗಳು ಅತೀ ಸೂಕ್ಷ್ಮ ಅಥವಾ ವಿವಾದಾತ್ಮಕವಾಗಿದೆಯೇ ಎಂಬುದು
- ನಿಮ್ಮ ತರಗತಿಯೊಂದಿಗೆ ಅವುಗಳನ್ನು ಬಳಸುವಾಗ ನೀವು ಎಷ್ಟು ಆತ್ಮ ವಿಶ್ವಾಸ ಹಾಗೂ ಸಮಾಧಾನದಿಂದ ಇರುವಿರಿ ಎಂಬುದು

ನೀವು ಆಯ್ಕೆ ಮಾಡಿದ ವಿಷಯಗಳು ಭಾಷೆ ಹಾಗೂ ಸಾಕ್ಷರತೆಗೆ ಸಂಬಂಧಿಸಿದಂತೆ ಒದಗಿಸುವ ಅವಕಾಶಗಳನ್ನು ಪಟ್ಟಿ ಮಾಡಿ. ಈ ಕಾರ್ಯಕ್ಕಾಗಿ ಕೆಲವು ಸಲಹೆಗಳು:

- ವಿಷಯ ಹಾಗೂ ಅದರ ಕಾರಣ-ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳಲು ವಾರ್ತಾಪತ್ರಿಕೆ ಅಥವಾ ಇತರ ಬರಹಗಳನ್ನು ಓದುವುದು
- ಸ್ಥಳೀಯ ವ್ಯಕ್ತಿಯನ್ನು ಸಂದರ್ಶಿಸುವುದು
- ಚರ್ಚೆಯನ್ನು ಏರ್ಪಡಿಸುವುದು
- ರಾಜಕಾರಣಿ ಅಥವಾ ಪತ್ರಿಕೆಯ ಸಂಪಾದಕರೊಬ್ಬರಿಗೆ ತರಗತಿ ಪತ್ರವೊಂದನ್ನು ಬರೆಯುವುದು
- ಭಿತ್ತಿ ಚಿತ್ರಗಳು ಹಾಗೂ ಕರಪತ್ರಗಳನ್ನು ತಯಾರಿಸುವುದು ಹಾಗೂ ಹಂಚುವುದು
- ಜಾಗೃತಿ ಚಳುವಳಿಯನ್ನು ಆಯೋಜಿಸುವುದು, ಮನವಿಯನ್ನು ತಯಾರಿಸುವುದು ಅಥವಾ ನಿಧಿ ಸಂಗ್ರಹಕ್ಕಾಗಿ ಕಾರ್ಯಕ್ರಮ ಆಯೋಜಿಸುವುದು
- ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಅಥವಾ ಸ್ಥಳೀಯ ಸಮುದಾಯದ ಸದಸ್ಯರಿಗೆ ಪ್ರಸ್ತುತ ಪಡಿಸಲು ವಿಷಯ ಕುರಿತಾಗಿ ನಾಟಕವೊಂದನ್ನು ರಚಿಸುವುದು

## 3 ಪೌರತ್ವದ ಯೋಜನಾ ಕಾರ್ಯವೊಂದರಲ್ಲಿ ನಿಮ್ಮ ವಿದ್ಯಾರ್ಥಿಗಳನ್ನು ತೊಡಗಿಸುವುದು

ನೀವು ವಿದ್ಯಾರ್ಥಿಗಳಿಗೆ ಅವರ ಆಯ್ಕೆಯ ವಿಷಯವನ್ನು ಅವರೇ ಸೂಚಿಸಲು ತಿಳಿಸಬಹುದು, ನೀವು ಕೆಲವು ಆಯ್ಕೆಗಳನ್ನು ಕೊಟ್ಟು ಅದರಲ್ಲಿ ಒಂದು ವಿಷಯವನ್ನು ಆರಿಸಿಕೊಳ್ಳಲು ತಿಳಿಸಬಹುದು ಅಥವಾ ನಿಮ್ಮ ಆಯ್ಕೆಯ ವಿಷಯವನ್ನು ಸೂಚಿಸಬಹುದು. ತರಗತಿ ಯೋಜನಾ

ಕಾರ್ಯದಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವಿಕೆಯು ಅವರ ಸಲಹೆಗಳು ಹಾಗೂ ವಿಚಾರಗಳನ್ನು ಆಲಿಸುವುದು ಹಾಗೂ ಅವುಗಳಿಗೆ ಪ್ರತಿಕ್ರಯಿಸುವುದನ್ನು ಒಳಗೊಂಡಿದೆ.

ವಿಷಯದ ಆಯ್ಕೆಗೆ ಯಾವುದೇ ಮಾರ್ಗವನ್ನು ಅನುಸರಿಸಿದರೂ, ನಿಮ್ಮ ವಿದ್ಯಾರ್ಥಿಗಳೊಂದಿಗೆ ಪೌರತ್ವದ ಪರಿಕಲ್ಪನೆಯನ್ನು ಚರ್ಚಿಸುವ ಮೂಲಕ ಪ್ರಾರಂಭಿಸುವುದು ಸೂಕ್ತವಾಗುತ್ತದೆ.

## ಚಟುವಟಿಕೆ 3: ನಿಮ್ಮ ವಿದ್ಯಾರ್ಥಿಗಳನ್ನು ತರಗತಿ ಯೋಜನಾ ಕಾರ್ಯವೊಂದರಲ್ಲಿ ತೊಡಗಿಸುವುದು

ನಿಮ್ಮ ವಿದ್ಯಾರ್ಥಿಗಳಿಗೆ ಅವರು ತರಗತಿ ಯೋಜನಾ ಕಾರ್ಯವೊಂದನ್ನು ಮಾಡಲಿರುವ ಬಗ್ಗೆ ಹಾಗೂ ಅದರ ಕುರಿತಾಗಿ ಅವರ ಸಲಹೆಗಳನ್ನು ನೀವು ಬಯಸಿರುವಿರೆಂಬುದನ್ನು ವಿವರಿಸಿ. ತರಗತಿಯನ್ನು ಗುಂಪುಗಳಾಗಿ ವ್ಯವಸ್ಥೆ ಮಾಡಿ. ಚರ್ಚೆಯನ್ನು ಆರಂಭಿಸುವುದಕ್ಕಾಗಿ ಪ್ರಶ್ನೆ ಅಥವಾ ಆಯ್ದ ವಿಷಯ ಹೊಂದಿರುವ ಕಾಗದವೊಂದನ್ನು ಪ್ರತಿ ಗುಂಪಿಗೆ ಕೊಡಿ:

- ನಮ್ಮ ಶಾಲೆಯನ್ನು ಮತ್ತಷ್ಟು ಆಕರ್ಷಣೀಯವಾಗಿ ನಾವು ಹೇಗೆ ಮಾಡಬಹುದು?
- ನಮ್ಮ ಗ್ರಾಮವನ್ನು ನಾನು ಹೇಗೆ ಉತ್ತಮಪಡಿಸಬಹುದು?

ಚರ್ಚೆಯಲ್ಲಿ ಪ್ರತಿಯೊಬ್ಬರೂ ಕನಿಷ್ಠ ಒಂದು ವಿಚಾರದೊಂದಿಗೆ ಭಾಗವಹಿಸುವಂತೆ ಪ್ರೋತ್ಸಾಹಿಸಿ. ತಮ್ಮ ವಿಚಾರವನ್ನು ನೀವು ಕೊಟ್ಟಿರುವ ಕಾಗದದಲ್ಲಿ ಬರೆಯುವಂತೆ ತಿಳಿಸಿ. ಕೊಟ್ಟ ಸಮಯಾವಕಾಶ ಮುಗಿದ ನಂತರ ಇಡೀ ತರಗತಿಗೆ ಹಿಮ್ಮಾಹಿತಿ ನೀಡುವಂತೆ ಪ್ರತಿ ಗುಂಪನ್ನು ಪ್ರೋತ್ಸಾಹಿಸಿ, ವಿಚಾರಗಳನ್ನು ಕಪ್ಪು ಹಲಗೆಯ ಮೇಲೆ ಬರೆಯಿರಿ. ತಮ್ಮ ಸಹಪಾಠಿಗಳು ನೀಡುವ ಸಲಹೆಗಳನ್ನು ಪ್ರತಿಯೊಬ್ಬರು ಗೌರವಯುತವಾಗಿ ಆಲಿಸುವ ಬಗ್ಗೆ ಖಚಿತಪಡಿಸಿಕೊಳ್ಳಿ.

ಎಲ್ಲ ಗುಂಪುಗಳು ಪೂರ್ಣಗೊಳಿಸಿದ ನಂತರ, ವಿದ್ಯಾರ್ಥಿಗಳಿಗೆ ಅವರು ಬಹಳ ಇಷ್ಟ ಪಟ್ಟ ವಿಚಾರಗಳನ್ನು ಕುರಿತು ತಮ್ಮ ಗುಂಪುಗಳಲ್ಲಿ ಚರ್ಚಿಸುವಂತೆ ತಿಳಿಸಿ. ಸೂಕ್ತವೆನಿಸಿದಲ್ಲಿ ಇಡೀ ತರಗತಿಯಲ್ಲಿ  ಅಭಿಪ್ರಾಯ ಮಂಡನೆಗೆ ಅವಕಾಶ ಕೊಡಿ.

ಇಂತಹ ಚರ್ಚೆಗಳಿಂದಾಗಿ, ನಿಮ್ಮ ವಿದ್ಯಾರ್ಥಿಗಳು ತಮಗೆ ಸಂಬಂಧಿಸಿದ ವಿಷಯಗಳ ಕುರಿತು ಆಲೋಚಿಸುವ, ಮತ ಚಲಾಯಿಸುವ ಹಾಗೂ ಒಪ್ಪಂದಕ್ಕೆ ಬರುವ ಮೂಲಕ ಪೌರತ್ವದ ಕೌಶಲಗಳನ್ನು ಬೆಳೆಸಿಕೊಳ್ಳುತ್ತಾರೆ. ಆಲಿಸುವ, ಚರ್ಚಿಸುವ, ಟಿಪ್ಪಣಿ ಬರೆಯುವ ಹಾಗೂ ಇಡೀ ತರಗತಿಗೆ ಹಿಮ್ಮಾಹಿತಿ ನೀಡುವ ಮೂಲಕ ಅವರು ಭಾಷೆ ಹಾಗೂ ಸಾಕ್ಷರತೆಯ ಕೌಶಲಗಳನ್ನು ಬೆಳೆಸಿಕೊಳ್ಳುವರು ಯೋಜನಾ ಕಾರ್ಯದ ಉದ್ದಕ್ಕೂ ಕಲಿಕೆಯ ಈ ಎರಡು ಎಳೆಗಳನ್ನು ಅನುಸರಿಸಬೇಕು.



**ಚಿಂತನೆಗೊಂದು ಕ್ಷಣ**

ನಿಮ್ಮ ವಿದ್ಯಾರ್ಥಿಗಳೊಂದಿಗೆ ಈ ಚಟುವಟಿಕೆಯನ್ನು ಮಾಡುವ ಮೂಲಕ ಅವರ ಬಗ್ಗೆ ನೀವು ಏನು ತಿಳಿದಿರಿ?

ಎಲ್ಲ ವಿದ್ಯಾರ್ಥಿಗಳನ್ನು ತರಗತಿ ಕಲಿಕೆಯಲ್ಲಿ ಒಳಗೊಳ್ಳಿಸುವಿಕೆಯ ಹೆಚ್ಚಿನ ವಿಚಾರಗಳಿಗಾಗಿ ಸಂಪನ್ಮೂಲ 2ನ್ನು ನೋಡಿ.



**ವಿಡಿಯೋ: Involving all**

### ಯೋಜನಾ ಕಾರ್ಯಕ್ಕಾಗಿ ಮಾಹಿತಿಯ ಮೂಲಗಳನ್ನು ಗುರುತಿಸುವುದು

ಯೋಜನಾ ಕಾರ್ಯದ ಮುಂದಿನ ಹಂತ, ವಿಷಯದ ಬಗ್ಗೆ ಮಾಹಿತಿ ಸಂಗ್ರಹಿಸುವ ವಿಧಾನಗಳನ್ನು ತಿಳಿಯಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

### ಚಟುವಟಿಕೆ 4: ವಿಷಯವನ್ನು ಸಂಶೋಧಿಸುವುದು (Researching the topic)

ವಿದ್ಯಾರ್ಥಿಗಳು ಸೂಚಿಸುವ ಮಾಹಿತಿಯ ಎಲ್ಲ ಮೂಲಗಳನ್ನು ಕಪ್ಪುಹಲಗೆಯ ಮೇಲೆ ಬರೆಯಿರಿ. ಅವು ಶಾಲೆಯ ಪಠ್ಯಪುಸ್ತಕ, ಗ್ರಂಥಾಲಯ, ದಿನಪತ್ರಿಕೆ, ಅಂತರ್ಜಾಲ, ಆರೋಗ್ಯ ಕೇಂದ್ರ, ಭಿತ್ತಿಚಿತ್ರಗಳು, ಕರ ಪತ್ರಗಳು, ಸ್ಥಳೀಯ ಸರ್ಕಾರದ ಕಛೇರಿ ಅಥವಾ ಸ್ಥಳೀಯ ಜನರನ್ನು ಒಳಗೊಂಡಿರಬಹುದು.


SHAMEFUL STATS

- As much as 48 per cent of children under the age of five in the country are stunted
- This means half of India's children are chronically malnourished
- Malnutrition is higher among kids whose mothers are uneducated or have less than five years of education
- The worst performing states are Madhya Pradesh (60 per cent), Jharkhand (56.5 per cent) and Bihar (55.9 per cent)
- The child sex ratio has slipped from 945 to 927 girls for every 1,000 boys










**ಚಿತ್ರ 3** ಮಾಹಿತಿಯ ಮೂಲಗಳು: ಒಂದು ದಿನ ಪತ್ರಿಕೆ, ಸ್ಥಳೀಯ ಜನರು,ಭಿತ್ತಿಚಿತ್ರಗಳು

ಉದಾಹರಣೆಗೆ ನಿಮ್ಮ ವಿದ್ಯಾರ್ಥಿಗಳು ನೀರಿನಿಂದ ಹರಡುವ ಕಾಯಿಲೆಗಳ ಬಗ್ಗೆ ಹೆಚ್ಚು ತಿಳಿಯಲು ಆಯ್ಕೆ ಮಾಡಿಕೊಂಡರೆ, ಅವರು ಸ್ಥಳೀಯ ಜಲಶುದ್ಧೀಕರಣ ಘಟಕಕ್ಕೆ ಭೇಟಿ ನೀಡಬಹುದು, ಹಾಗೂ ಪೂರ್ವಾನುಮತಿ ಮತ್ತು ಸಿದ್ಧತೆಯೊಂದಿಗೆ ಜಲಮಂಡಳಿಯಲ್ಲಿ ಕಾರ್ಯನಿರ್ವಹಿಸುವವರನ್ನು ಸಂದರ್ಶನ ಮಾಡಬಹುದು. ಅಥವಾ ಅವರು ಸಮುದಾಯ ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಆಸ್ಪತ್ರೆಗೆ ಭೇಟಿ ನೀಡಿ ಜಲಶುದ್ಧೀಕರಣ ಹಾಗೂ ಸುರಕ್ಷತೆಯ ಬಗ್ಗೆ ಸಲಹೆಗಳನ್ನು ಪಡೆಯಬಹುದು. ನೀರಿನಿಂದ ಹರಡುವ ಕಾಯಿಲೆಗಳಿಂದ ರಕ್ಷಿಸಿಕೊಳ್ಳಲು ಕುಟುಂಬಗಳು ಏನು ಮಾಡಬಹುದು ಎಂಬುದನ್ನು ತಿಳಿಯಲು ಮಾಹಿತಿ ಕೇಂದ್ರವನ್ನು ಅವರು ಸಂಪರ್ಕಿಸಬಹುದು.

ವಿದ್ಯಾರ್ಥಿಗಳು ದಿನಪತ್ರಿಕೆಗಳು, ಪುಸ್ತಕಗಳು, ಮಾಹಿತಿ ಕರಪತ್ರಗಳನ್ನು ಓದುವ ಕೆಲಸ ಮಾಡಲಿ, ಸ್ಥಳೀಯ ತಜ್ಞರೊಂದಿಗೆ ಮಾತನಾಡಲಿ, ಸೂಕ್ತ ಸ್ಥಳಗಳಿಗೆ ಭೇಟಿ ಕೊಡಲಿ ಹಾಗೂ ಓದಿದ್ದನ್ನು, ಕೇಳಿದುದನ್ನು ಟಿಪ್ಪಣಿ ಮಾಡಲಿ, ಎಲ್ಲ ರೀತಿಯ ಸಂಶೋಧನೆಯು ಭಾಷೆ ಹಾಗೂ ಸಾಕ್ಷರತೆಯ ವೈವಿಧ್ಯಮಯ ಕೌಶಲಗಳನ್ನು ಒಳಗೊಂಡಿರುತ್ತದೆ.

## 4 ಪೌರತ್ವದ ಯೋಜನಾ ಕಾರ್ಯದ ರೂಪುರೇಷೆಯನ್ನು ತಯಾರಿಸುವುದು

### ಚಟುವಟಿಕೆ 5: ಯೋಜನಾ ಕಾರ್ಯದ ರೂಪುರೇಷೆ ಹಾಗೂ ಕಾರ್ಯಕ್ರಮ ವೇಳಾಪಟ್ಟಿ/ ಅನುಸೂಚಿಯೊಂದನ್ನು ಸಿದ್ಧಪಡಿಸುವುದು

ಯೋಜನಾ ಕಾರ್ಯದ ಸವಿವರ ಯೋಜನೆ ಸಿದ್ಧಪಡಿಸಿ. ಇದಕ್ಕಾಗಿ ವಿವಿಧ ಕಂಬುಸಾಲುಗಳನ್ನು ಒಳಗೊಂಡ ಕೋಷ್ಟಕವು ಹೆಚ್ಚು ಉತ್ತಮವಾದುದು.

- ನಿಮ್ಮ ಪ್ರಕಾರ ಯೋಜನಾ ಕಾರ್ಯವು ಒಳಗೊಳ್ಳುವ ಎಲ್ಲ ಚಟುವಟಿಕೆಗಳನ್ನು ಪಟ್ಟಿ ಮಾಡುವುದರೊಂದಿಗೆ ಪ್ರಾರಂಭಿಸಿ
- ಪ್ರತಿ ಚಟುವಟಿಕೆಯೊಂದಿಗೆ ಅವು ಒದಗಿಸುವ ಭಾಷಾ ಅವಕಾಶಗಳು ಹಾಗೂ ಕಲಿಕಾ ಅವಕಾಶಗಳನ್ನು ಪಟ್ಟಿ ಮಾಡಿ
- ಇಡೀ ತರಗತಿ ಕೈಗೊಳ್ಳಬಹುದಾದ ಹಾಗೂ ಸಣ್ಣ ಗುಂಪುಗಳಲ್ಲಿ ಹಂಚಬಹುದಾದ ಚಟುವಟಿಕೆಗಳ ಕುರಿತು ನಿರ್ಧರಿಸಿ

- ಪ್ರತಿ ಚಟುವಟಿಕೆಗಾಗಿ ನೀವು ಮಾಡಬೇಕಾದ ವ್ಯವಸ್ಥೆಯ ಕುರಿತು ಟಿಪ್ಪಣಿ ಬರೆಯಿರಿ. ಇದು ಸಂಪನ್ಮೂಲಗಳ ಸಂಗ್ರಹಿಸುವಿಕೆ, ಸ್ಥಳೀಯ ತಜ್ಞರನ್ನು ಸಂಪರ್ಕಿಸುವುದು ಅಥವಾ ತರಗತಿ ಭೇಟಿಗಳಿಗೆ ಅನುಮತಿ ಪಡೆಯುವಂತಹ ಕೆಲಸಗಳನ್ನು ಒಳಗೊಂಡಿರಬಹುದು. ಪ್ರತಿಯೊಂದಕ್ಕೆ ಎಷ್ಟು ಸಿದ್ಧತಾ ಸಮಯದ ಅವಶ್ಯಕತೆ ಇದೆ ಎಂಬುದನ್ನು ನಿರ್ಧರಿಸಿ
- ಮುಂದಿನ ಕೆಲವು ವಾರಗಳಿಗಾಗಿ ನೀವು ಗುರುತಿಸುವ ಚಟುವಟಿಕೆಗಳನ್ನು ಸೂಕ್ತ ಅನುಕ್ರಮದಲ್ಲಿ ಒಳಗೊಳ್ಳುವ ಪಾಠಗಳ ಸರಣಿಯನ್ನು ಯೋಜಿಸಿ
- ಯೋಜನೆಯ ನಂತರ ಪ್ರತಿ ಪಾಠವನ್ನು ನಿಮ್ಮ ವೇಳಾಪಟ್ಟಿಗೆ ಅನುಗುಣವಾಗಿ ಹೊಂದಿಸಿ, ಪಠ್ಯಕ್ರಮದ ಇತರ ವಿಷಯ ಕ್ಷೇತ್ರಗಳಿಗೆ ಸರಿ ಹೊಂದುವಿದರ ಕುರಿತು ಗಮನ ನೀಡಿ. ಯಾವುದೇ ಅನಿರೀಕ್ಷಿತ ಸನ್ನಿವೇಶಗಳನ್ನು ಗಮನದಲ್ಲಿರಿಸಿಕೊಂಡು ಸ್ವಲ್ಪ ಹೆಚ್ಚು ಸಮಯವನ್ನು ಯೋಜನೆಯಲ್ಲಿ ಸೇರಿಸಿದ್ದರೆ ಒಳ್ಳೆಯದು
- ಸಹಾಯವಾಗುವುದಾದರೆ ನಿಮ್ಮ ಯೋಜನೆಯ ಪ್ರಕ್ರಿಯೆಯನ್ನು ನಿಮ್ಮ ಸಹೋದ್ಯೋಗಿಯೊಂದಿಗೆ ಹಂಚಿಕೊಳ್ಳಿ

ಪ್ರಮುಖ ಸಂಪನ್ಮೂಲ 'Planning lessons' ನಿಮಗೆ ಸಹಾಯವಾಗಬಹುದು.



**ವಿಡಿಯೋ: Planning lessons**

## 5 ನಿಮ್ಮ ವಿದ್ಯಾರ್ಥಿಗಳ ಕಲಿಕೆಯನ್ನು ಪ್ರಸ್ತುತ ಪಡಿಸುವ ವಿಧಾನಗಳು

### ಚಟುವಟಿಕೆ 6: ನಿಮ್ಮ ವಿದ್ಯಾರ್ಥಿಗಳ ಕಲಿಕೆಯನ್ನು ಪ್ರಸ್ತುತ ಪಡಿಸುವುದು

ಯೋಜನಾ ಕಾರ್ಯ ಮಾಡುತ್ತಾ ಹೋದಂತೆ ವಿದ್ಯಾರ್ಥಿಗಳು ತಮ್ಮ ಕಲಿಕೆಯನ್ನು ಹಲವಾರು ವಿಧಾನಗಳಲ್ಲಿ ಪ್ರಸ್ತುತ ಪಡಿಸಬಹುದು ಹಾಗೂ ಹಂಚಿಕೊಳ್ಳಬಹುದು. ಇದನ್ನು ಅವರು ವೈಯಕ್ತಿಕವಾಗಿ ಅಥವಾ ಸಹಯೋಗದಲ್ಲಿ ನಿರ್ವಹಿಸಿರಬಹುದು, ಇದು ಲಿಖಿತ ವರದಿ, ಒಂದು ಭಿತ್ತಿ ಚಿತ್ರ, ಕಲಾಕೆಲಸ, ಒಂದು ಪ್ರದರ್ಶನ, ಹಾಡುಗಳು, ಕಥೆಗಳು, ಕವನಗಳು ಅಥವಾ ಸಮುದಾಯ ಕೆಲಸದ ರೂಪ ಪಡೆಯಬಹುದು.








8 कौन?

किसने बटन हमारे कुतरे?
किसने स्याही को बिखराया?
कौन चट कर गया दुबक कर
घर-भर में अनाज बिखराया?

दोना खाली रखा रह गया
कौन ले गया उठा मिठाई?
दो टुकड़े तसवीर हो गई
किसने रस्सी काट बहाई?

कभी कुतर जाता है चप्पल
कभी कुतर जूता है जाता,
कभी खलीता पर बन आती
अनजाने पैसा गिर जाता

किसने जिल्द काट डाली है?
बिखर गए पोथी के पन्ने।
रोज़ टाँगता धो-धोकर मैं
कौन उठा ले जाता छन्ने?






**ಚಿತ್ರ 4** ನಿಮ್ಮ ವಿದ್ಯಾರ್ಥಿಗಳ ಕಲಿಕೆಯನ್ನು ಪ್ರಸ್ತುತಪಡಿಸುವ ವಿಭಿನ್ನ ವಿಧಾನಗಳು. ಒಂದು ಭಿತ್ತಿಚಿತ್ರ, ಸಮುದಾಯ ಕೆಲಸ, ಲಿಖಿತ ವರದಿ, ಕಲಾ ಕೆಲಸ, ಒಂದು ಪ್ರದರ್ಶನ

ವಿದ್ಯಾರ್ಥಿಗಳು ತಮ್ಮ ಕೆಲಸವನ್ನು ಮುಖ್ಯ ಶಿಕ್ಷಕರು, ಶಾಲೆಯ ಸಿಬ್ಬಂದಿ, ಪೋಷಕರು, ಗ್ರಾಮದ ಹಿರಿಯರು, ಪಂಚಾಯ್ತಿ, ಸರ್ಕಾರದ ಪ್ರತಿನಿಧಿಗಳ ಎದುರು ಪ್ರಸ್ತುತ ಪಡಿಸಲು ಬಯಸಬಹುದು. ನಿಮ್ಮ ವಿದ್ಯಾರ್ಥಿಗಳನ್ನು ದಿನಪತ್ರಿಕೆಯೊಂದಕ್ಕೆ ಪತ್ರ ಅಥವಾ ವರದಿಯನ್ನು ಬರೆಯುವಂತೆ ಪ್ರೋತ್ಸಾಹಿಸುವ ಮೂಲಕ ಅವರ ಕಲಿಕೆಯ ಬಗ್ಗೆ ಜನರು ತಿಳಿಯುವಂತೆ ಮಾಡಬಹುದು. ಸಾಧ್ಯವಾದಲ್ಲಿ, ನಿಮ್ಮ ವಿದ್ಯಾರ್ಥಿಗಳು ಯೋಜನಾ ಕಾರ್ಯದಲ್ಲಿ ತೊಡಗಿರುವ ಛಾಯಾಚಿತ್ರಗಳನ್ನು ತೆಗೆಯಿರಿ ಹಾಗೂ ಇತರರೊಂದಿಗೆ ಹಂಚಿಕೊಳ್ಳಿ.

### ಚಟುವಟಿಕೆ 7: ನಿಮ್ಮ ವಿದ್ಯಾರ್ಥಿಗಳ ಕಲಿಕೆಯ ಕುರಿತು ಚಿಂತನಾಶೀಲರಾಗುವುದು

ವಿಷಯ ಸಂಬಂಧಿತ ಯೋಜನಾ ಕಾರ್ಯವೊಂದನ್ನು ಮಾಡುವ ಮೂಲಕ ನಿಮ್ಮ ವಿದ್ಯಾರ್ಥಿಗಳು ಪೌರತ್ವದ ಕುರಿತು ಏನು ಕಲಿಯುತ್ತಾರೆಂದು ನಿಮಗೆನಿಸುತ್ತದೆ? ಕೆಳಗಿನ ಅಂಶಗಳ ಕುರಿತು ಅವರು ಗಳಿಸುತ್ತಿದ್ದ ಜ್ಞಾನ ಹಾಗೂ ತಿಳುವಳಿಕೆಯನ್ನು ನೀವು ಗಮನಿಸಿದ್ದೀರಾ?

- ಪ್ರಜಾಪ್ರಭುತ್ವ, ನ್ಯಾಯ ಹಾಗೂ ಸಮಾನತೆ
- ವಿದ್ಯಾರ್ಥಿಗಳಿಗೆ ಹಾಗೂ ಅವರ ಸಮುದಾಯಕ್ಕೆ ಪ್ರಮುಖವಾದ ಪ್ರಚಲಿತ ಘಟನೆಗಳು
- ತಾವು ಜಾಗತಿಕ ಸಮುದಾಯದ ಸದಸ್ಯರಾಗಿರುವ ಕುರಿತು ತಿಳುವಳಿಕೆ ಹೊಂದಿರುವ ಬಗ್ಗೆ
- ಇತರರನ್ನು ಗೌರವ ಹಾಗೂ ಘನತೆಯಿಂದ ನಡೆಸಿಕೊಳ್ಳುವುದು
- ಕ್ರಿಯಾಶೀಲರಾಗಿರುವುದು

- ಒಬ್ಬರು ಮತ್ತೊಬ್ಬರಿಗೆ ಪರಸ್ಪರ ಮಾರ್ಗದರ್ಶಕರಾಗಿರುವುದು
- ಪರಸ್ಪರನ್ನು ಸಂರಕ್ಷಿಸುವುದು

ಈ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ನೀವು ಗಮನಿಸಿದ ಪೌರತ್ವ ಸಂಬಂಧಿತ ಜ್ಞಾನ ಹಾಗೂ ತಿಳಿವಳಿಕೆಗಳು ಯಾವುವು? ಈ ಅಂಶಗಳನ್ನು ನಿಮ್ಮ ಎಲ್ಲ ವಿದ್ಯಾರ್ಥಿಗಳ ಪ್ರಗತಿ ಹಾಗೂ ಬೆಳವಣಿಗೆಯ ಚಾರ್ಟ್ ನಲ್ಲಿ ಹೇಗೆ ವ್ಯಕ್ತಪಡಿಸುವಿರಿ?

ವಿಷಯ ಸಂಬಂಧಿತ ಯೋಜನಾ ಕಾರ್ಯದ ಮೂಲಕ ಭಾಷೆ ಹಾಗೂ ಸಾಕ್ಷರತೆಯ ಬಗ್ಗೆ ನಿಮ್ಮ ವಿದ್ಯಾರ್ಥಿಗಳು ಕಲಿತುದೇನು? ಈ ಕೆಳಗಿನ ಯಾವುದಾದರೂ ಕೌಶಲಗಳನ್ನು ಅವರು ಬಳಸಿದ್ದನ್ನು ನೀವು ಗಮನಿಸಿದ್ದೀರಾ?

- ಮಾಹಿತಿಗಾಗಿ ಓದುವುದು
- ತಾವು ಓದಿದುದನ್ನು, ಕೇಳಿದುದನ್ನು ಅಥವಾ ನೋಡಿದುದನ್ನು ಬರೆಯುವುದು
- ಸಂದರ್ಶನ ತಂತ್ರಗಳು
- ಮಾಹಿತಿಯ ಮೌಲ್ಯಮಾಪನ ಮಾಡುವುದು
- ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು
- ಗೌರವಯುತವಾಗಿ ಚರ್ಚಿಸುವುದು
- ಪ್ರಸ್ತುತಿಯೊಂದನ್ನು ನೀಡುವುದು
- ಶಾಬ್ದಿಕವಲ್ಲದ ಸಂವಹನ

ನಿಮ್ಮ ಎಲ್ಲಾ ವಿದ್ಯಾರ್ಥಿಗಳನ್ನು ಅವರ ಆಸಕ್ತಿಗಳು ಹಾಗೂ ಸಾಮರ್ಥ್ಯಗಳಿಗೆ ಅನುಗುಣವಾಗಿ ವಿಷಯ ಸಂಬಂಧಿತ ಯೋಜನಾ ಕಾರ್ಯದಲ್ಲಿ ಹೇಗೆ ಒಳಗೊಳ್ಳಿಸಿದಿರಿ?

ವಿದ್ಯಾರ್ಥಿಗಳು ಯೋಜನಾ ಕಾರ್ಯಕ್ಕೆ ನೀಡಿದ ಕೊಡುಗೆಗಳನ್ನು ನೀವು ಅಮೂಲ್ಯವೆಂದು ಪರಿಗಣಿಸಿದ್ದನ್ನು ಹೇಗೆ ವ್ಯಕ್ತಪಡಿಸಿದಿರಿ? ನಿಮ್ಮ ನಿರೀಕ್ಷೆ ಇಲ್ಲದ ರೀತಿಯಲ್ಲಿ ಯಾವುದಾದರೂ ವಿದ್ಯಾರ್ಥಿಗಳು ತಮ್ಮ ಕೊಡುಗೆ ಸಲ್ಲಿಸಿದರೆ?

## 6 ಸಾರಾಂಶ

ಈ ಘಟಕವು ವಿಷಯ ಜ್ಞಾನವನ್ನು ಹಲವು ವಾರಗಳ ಅವದಿಯಲ್ಲಿ ಪಾಠಗಳ ಸರಣಿಯ ಮೂಲಕ ಗಳಿಸುವುದರ ಜೊತೆಗೆ, ಉತ್ತಮ ಪೌರತ್ವದೊಂದಿಗೆ ಸಂಬಂಧ ಹೊಂದಿರುವ ಮೌಲ್ಯಗಳ ಬೆಳವಣಿಗೆ ಮತ್ತು ಭಾಷೆ ಹಾಗೂ ಸಾಕ್ಷರತೆಯ ಉದ್ದೇಶಗಳನ್ನು ಅಂತರ್ಗತಗೊಳಿಸುವ ಒಂದು ನಿರ್ದಿಷ್ಟ ವಿಷಯ ಸಂಬಂಧಿತ ಯೋಜನಾ ಕಾರ್ಯವನ್ನು ಯೋಜಿಸಿ, ಅನುಷ್ಠಾನ ಗೊಳಿಸಲು ಸಾಧ್ಯವಾಗುವ ಯೋಜನೆಯೊಂದರ ರೂಪುರೇಷೆಯನ್ನು ಒದಗಿಸುತ್ತದೆ.

ಸಂಶೋಧನೆ, ಚರ್ಚೆ, ಅವಲೋಕನ ಹಾಗೂ ಪ್ರಚುರಪಡಿಸುವುದನ್ನು ಒಳಗೊಂಡ ಕಲ್ಪನಾತ್ಮಕ, ಸಹಯೋಗದಿಂದ ಕೂಡಿದ, ಸಮುದಾಯ ಕೇಂದ್ರಿತ ಚಟುವಟಿಕೆಗಳಲ್ಲಿ ತೊಡಗುವುದರಿಂದ ವಿದ್ಯಾರ್ಥಿಗಳಿಗೆ ಸಾಮಾಜಿಕವಾಗಿ ಹಾಗೂ ಬೌದ್ಧಿಕವಾಗಿ ಲಾಭವಾಗುವುದಲ್ಲದೆ ಅವರಲ್ಲಿ ಅಂತಹ ಕಲಿಕಾ ಅನುಭವಗಳ ಧನಾತ್ಮಕ ನೆನಪುಗಳು ಉಳಿಯಲು ಸಾಧ್ಯವಾಗುತ್ತದೆ. ಇಂತಹ ಯೋಜನಾ ಕಾರ್ಯಗಳನ್ನು ಯಾವುದೇ ಹಂತದ ವಿದ್ಯಾರ್ಥಿಗಳಿಗೆ ಸರಿಹೊಂದುವಂತೆ ಅಳವಡಿಸಿಕೊಳ್ಳಬಹುದು. ಒಮ್ಮೆ ನಿಮ್ಮ ಯೋಜನೆಯು ಸಿದ್ಧವಾದಲ್ಲಿ ವರ್ಷದಿಂದ ವರ್ಷಕ್ಕೆ ಅದನ್ನು ನೀವು ಬಳಸಬಹುದು ಹಾಗೂ ಬೆಳೆಸಬಹುದು. ಯೋಜನಾ ಕಾರ್ಯದ ಯೋಜನೆ ಹಾಗೂ ಅನುಷ್ಠಾನ ಕುರಿತು ನಿಮ್ಮ ಸಹೋದ್ಯೋಗಿಯೊಂದಿಗೆ ಹಂಚಿಕೊಳ್ಳಲು ಅವಕಾಶ ದೊರೆತಲ್ಲಿ ಇಡೀ ಪ್ರಕ್ರಿಯೆಯು ಹೆಚ್ಚು ಪ್ರಯೋಜನಕಾರಿಯಾಗುವುದೆಂಬುದನ್ನು ನೀವು ತಿಳಿಯುವಿರಿ.

## ಸಂಪನ್ಮೂಲಗಳು

### ಸಂಪನ್ಮೂಲಗಳು 1: ಭಾರತೀಯ ಪೌರರ ಮೂಲಭೂತ ಕರ್ತವ್ಯಗಳು

ಮೂಲಭೂತ ಕರ್ತವ್ಯಗಳು - ಪ್ರತಿಯೊಬ್ಬ ನಾಗರಿಕನಿಗೂ/ಪೌರನಿಗೂ

a. ಸಂವಿಧಾನವನ್ನು ಅನುವರ್ತಿಸುವುದು ಹಾಗೂ ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಹಾಗೂ ರಾಷ್ಟ್ರಗೀತೆಯನ್ನು ಗೌರವಿಸುವುದು;

ಭಾಷೆ, ಸಾಕ್ಷರತೆ ಹಾಗೂ ಪೌರತ್ವ

b. ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು;

c. ಭಾರತದ ಸಾರ್ವಭೌಮತ್ವವನ್ನು ಐಕ್ಯತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು;

d. ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ, ಹಾಗೆ ಮಾಡುವುದು;

e. ಧಾರ್ಮಿಕ ಭಾಷಾ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ವಿಭಿನ್ನತೆಗಳಿಂದ ಅತೀತವಾಗಿ, ಭಾರತದ ಎಲ್ಲಾ ಜನತೆಯಲ್ಲಿ, ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟು ಮಾಡುವ ಆಚರಣೆಗಳನ್ನು ಬಿಟ್ಟು ಬಿಡುವುದು;

f. ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು;

g. ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳೂ ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಮೇಲ್ಪಟ್ಟಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು;

h. ವೈಜ್ಞಾನಿಕ ಮನೋಭಾವನೆ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಅಭಿವೃದ್ಧಿಗೊಳಿಸುವುದು;

i. ಸಾರ್ವಜನಿಕ ಸ್ವತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು;

j. ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಉನ್ನತ ಮಟ್ಟಗಳಿಗೆ ಬರುವುದಕ್ಕಾಗಿ ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿ ಶ್ರೇಷ್ಠವಾಗಿ ಶ್ರಮಿಸುವುದು (ಕರ್ತವ್ಯವಾಗಿರತಕ್ಕದ್ದು)

(ಮೂಲ: ಕರ್ನಾಟಕ ಸರ್ಕಾರ ಪಠ್ಯಪುಸ್ತಕ ನಿರ್ದೇಶನಾಲಯ ಕನ್ನಡ ಭಾರತಿ - 2 - 1997)

## ಸಂಪನ್ಮೂಲ 2: 'ಎಲ್ಲರನ್ನೂ ಒಳಗೊಳ್ಳುವುದು' ಎಂಬುದರ ಅರ್ಥವೇನು?

ಸಂಸ್ಕೃತಿ ಹಾಗೂ ಸಮಾಜದಲ್ಲಿನ ವೈವಿಧ್ಯತೆಯು ತರಗತಿಯಲ್ಲಿ ಪ್ರತಿಬಿಂಬಿಸುತ್ತದೆ. ವಿದ್ಯಾರ್ಥಿಗಳು ವಿವಿಧ ಭಾಷೆ, ಆಸಕ್ತಿ ಹಾಗೂ ಸಾಮರ್ಥ್ಯಗಳನ್ನು ಹೊಂದಿರುತ್ತಾರೆ. ಅವರು ವಿವಿಧ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಗಳಿಂದ ಬಂದಿರುತ್ತಾರೆ.

ನಾವು ಈ ವಿಭಿನ್ನತೆಗಳನ್ನು ಕಡೆಗಣಿಸದೆ, ಸಂಭ್ರಮಿಸಬೇಕು. ಏಕೆಂದರೆ ನಮ್ಮ ಅನುಭವಾತೀತವಾದದ್ದನ್ನು ತಿಳಿಯಲು, ಒಬ್ಬರು ಮತ್ತೊಬ್ಬರನ್ನು ತಿಳಿಯಲು ಈ ವಿಭಿನ್ನತೆಗಳು ಸಾಧನವಾಗಬಲ್ಲವು. ಎಲ್ಲ ವಿದ್ಯಾರ್ಥಿಗಳು ಸ್ಥಾನಮಾನ, ಸಾಮರ್ಥ್ಯ ಹಾಗೂ ಹಿನ್ನೆಲೆಯ ಬೇಧವಿಲ್ಲದೆ ಕಲಿಯುವ ಅವಕಾಶ ಹಾಗೂ ಶಿಕ್ಷಣಕ್ಕೆ ಹಕ್ಕನ್ನು ಪಡೆದಿದ್ದಾರೆ. ಈ ಅಂಶವನ್ನು ಭಾರತದಲ್ಲಿನ ಕಾನೂನು ಹಾಗೂ ಅಂತರಾಷ್ಟ್ರೀಯ ಮಕ್ಕಳ ಹಕ್ಕುಗಳಲ್ಲಿ ಗುರುತಿಸಲಾಗಿದೆ. 2014ರಲ್ಲಿ ಪ್ರಧಾನಮಂತ್ರಿ ಮೋದಿಯವರು ತಮ್ಮ ಮೊದಲ ಭಾಷಣದಲ್ಲಿ ಭಾರತದ ಎಲ್ಲ ಪ್ರಜೆಗಳಿಗೆ ಅವರ ಜಾತಿ, ಅಥವಾ ಆದಾಯವನ್ನು ಲೆಕ್ಕಿಸದೆ ಬೆಲೆ ಕೊಡಬೇಕಾದ ಪ್ರಾಮುಖ್ಯತೆಯನ್ನು ಕುರಿತು ಒತ್ತಿ ಹೇಳಿದ್ದಾರೆ. ಈ ನಿಟ್ಟಿನಲ್ಲಿ ಶಾಲೆಗಳು ಹಾಗೂ ಶಿಕ್ಷಕರ ಪಾತ್ರ ಬಹಳ ಮಹತ್ವಪೂರ್ಣವಾದುದಾಗಿದೆ.

ಬೇರೆಯವರ ಕುರಿತು ನಮಗೆಲ್ಲರಿಗೂ ಕೆಲವು ಅಭಿಪ್ರಾಯಗಳು ಹಾಗೂ ಪೂರ್ವಾಗ್ರಹಗಳಿದ್ದು, ಅವುಗಳನ್ನು ನಾವು ಗಮನಿಸದಿರಬಹುದು ಅಥವಾ ವ್ಯಕ್ತಪಡಿಸದಿರಬಹುದು. ಶಿಕ್ಷಕರಾಗಿ ಪ್ರತಿ ವಿದ್ಯಾರ್ಥಿಗಳ ಶೈಕ್ಷಣಿಕ ಅನುಭವವನ್ನು ಧನಾತ್ಮಕವಾಗಿ ಅಥವಾ ಋಣಾತ್ಮಕವಾಗಿ ಪ್ರಭಾವಗೊಳಿಸುವ ಶಕ್ತಿ ನಿಮ್ಮಲ್ಲಿದೆ. ನಿಮಗೆ ತಿಳಿದು ಅಥವಾ ತಿಳಿಯದೆಯೇ ನಿಮ್ಮಲ್ಲಿನ ಪೂರ್ವಾಗ್ರಹಗಳು ಹಾಗೂ ಅಭಿಪ್ರಾಯಗಳು ನಿಮ್ಮ ವಿದ್ಯಾರ್ಥಿಗಳು ಎಷ್ಟು ಸಮಾನವಾಗಿ ಕಲಿಯುತ್ತಾರೆಂಬುದರ ಮೇಲೆ ತಮ್ಮ ಪ್ರಭಾವ ಬೀರುತ್ತವೆ.

ನಿಮ್ಮ ವಿದ್ಯಾರ್ಥಿಗಳನ್ನು ಅಸಮಾನವಾಗಿ ಕಾಣುವುದರ ವಿರುದ್ಧ ರಕ್ಷಿಸಲು ನೀವು ಕೆಲವು ಕ್ರಮಗಳನ್ನು ಕೈಗೊಳ್ಳಬಹುದು.

ಕಲಿಕೆಯಲ್ಲಿ ನೀವು ಎಲ್ಲರೂ ಒಳಗೊಳ್ಳುವುದನ್ನು ದೃಢಪಡಿಸಿಕೊಳ್ಳಲು ಮೂರು ಪ್ರಮುಖ ತತ್ವಗಳು

- *ಲಕ್ಷ್ಯ ಕೊಡುವುದು(noticing):* ಪರಿಣಾಮಕಾರಿ ಶಿಕ್ಷಕರು ಬಹುಬೇಗ ಗಮನಿಸುವರು, ಯಥಾದೃಷ್ಟಿಯುಳ್ಳವರು ಹಾಗೂ ಸೂಕ್ಷ್ಮಗ್ರಾಹಿಗಳೂ ಆಗಿರುತ್ತಾರೆ. ಅವರು ತಮ್ಮ ವಿದ್ಯಾರ್ಥಿಗಳಲ್ಲಿ ಬದಲಾವಣೆಗಳಿಗೆ ಲಕ್ಷ್ಯ ಕೊಡುತ್ತಾರೆ. ನೀವು ಬಹುಬೇಗ ಗಮನಿಸುವವರಾಗಿದ್ದರೆ, ಒಬ್ಬ ವಿದ್ಯಾರ್ಥಿ ಏನನ್ನಾದರೂ ಉತ್ತಮವಾಗಿ ಮಾಡಿದಾಗ, ವಿದ್ಯಾರ್ಥಿಗಳಿಗೆ ಸಹಾಯ ಬೇಕಾದಾಗ ಹಾಗೂ ಅವರು ಬೇರೆಯವರೊಂದಿಗೆ ಹೇಗಿದ್ದಾರೆಂಬುದಕ್ಕೆ ಲಕ್ಷ್ಯ ಕೊಡುತ್ತೀರಿ. ವಿದ್ಯಾರ್ಥಿಗಳಲ್ಲಿನ ಬದಲಾವಣೆ, ಅವರ ಮನೆಯ ಸನ್ನಿವೇಶಗಳು ಹಾಗೂ ಇತರ ವಿಚಾರಗಳಲ್ಲಿ ಪ್ರತಿಬಿಂಬಿತವಾಗುತ್ತಿರುವುದನ್ನು ನೀವು ಅರ್ಥಮಾಡಿಕೊಳ್ಳಬಲ್ಲಿರಿ. ಎಲ್ಲರನ್ನೂ ತೊಡಗಿಸಿಕೊಳ್ಳಬೇಕಾದರೆ ನೀವು ನಿಮ್ಮ ವಿದ್ಯಾರ್ಥಿಗಳೆಡೆಗೆ ಪ್ರತಿದಿನ ನಿಯತವಾಗಿ ಲಕ್ಷ್ಯ ಕೊಡಬೇಕು ಹಾಗೂ ಭಾಗವಹಿಸಲು

ಸಾಧ್ಯವಾಗದಿರುವ ಅಥವಾ ತಮ್ಮನ್ನು ಮೂಲೆಗುಂಪಾಗಿಸಲಾಗಿದೆ ಎಂದು ಭಾವಿಸಿರುವ ವಿದ್ಯಾರ್ಥಿಗಳನ್ನು ನಿರ್ದಿಷ್ಟವಾಗಿ ಗಮನಿಸಬೇಕು.

- *ಆತ್ಮಗೌರವದ ಮೇಲೆ ಕೇಂದ್ರೀಕರಿಸುವುದು* : ಉತ್ತಮ ಪ್ರಜೆಗಳೆಂದರೆ ತಾವು ಏನಾಗಿರುವರೋ ಆ ಕುರಿತು ನೆಮ್ಮದಿಯಾಗಿರುವವರು. ಅವರಿಗೆ ಆತ್ಮಗೌರವವಿದ್ದು, ತಮ್ಮ ಬಲ ಹಾಗೂ ದೌರ್ಬಲ್ಯಗಳನ್ನು ತಿಳಿದಿರುತ್ತಾರೆ. ಇತರರೊಂದಿಗೆ, ಅವರ ಹಿನ್ನೆಲೆಯನ್ನು ಲೆಕ್ಕಿಸದೆ ಧನಾತ್ಮಕ ಸಂಬಂಧಗಳನ್ನು ರೂಪಿಸಿಕೊಳ್ಳುವ ಸಾಮರ್ಥ್ಯವುಳ್ಳವರಾಗಿರುತ್ತಾರೆ. ಅವರು ತಮ್ಮನ್ನು ಹಾಗೂ ಇತರರನ್ನು ಗೌರವಿಸುತ್ತಾರೆ. ಶಿಕ್ಷಕರಾಗಿ ನೀವು ಕಿರಿಯ ವಯಸ್ಸಿನ ಮಕ್ಕಳ ಆತ್ಮ-ಗೌರವದ ಮೇಲೆ ಬಲವಾದ ಪ್ರಭಾವ ಬೀರಬಲ್ಲಿರಿ;ಈ ಶಕ್ತಿಯ ಕುರಿತು ನಿಮಗೆ ಎಚ್ಚರವಿರಲಿ ಹಾಗೂ ಇದನ್ನು ಪ್ರತಿ ವಿದ್ಯಾರ್ಥಿಯ ಆತ್ಮಗೌರವವನ್ನು ನಿರ್ಮಿಸಲು ಬಳಸಿ.
- *ನಮ್ಯತೆ (flexibility)*: ತರಗತಿಯಲ್ಲಿ ನಿಮ್ಮ ಯೋಜನೆಗಳು ಅಥವಾ ಚಟುವಟಿಕೆಗಳು ಯಾವುದೇ ನಿರ್ದಿಷ್ಟ ವಿದ್ಯಾರ್ಥಿಗೆ ಅಥವಾ ಗುಂಪುಗಳಿಗೆ ಸಹಾಯಕವಾಗುತ್ತಿಲ್ಲವೆನಿಸಿದಾಗ ಬದಲಾವಣೆಗೆ ಸಿದ್ಧರಾಗಿರಿ. ನಮ್ಯತೆಗೆ ಸಿದ್ಧರಾಗಿದ್ದಾಗ ಹೊಂದಾಣಿಕೆಗಳಿಗೆ ಅವಕಾಶವಿರುತ್ತದೆ. ಇದರಿಂದಾಗಿ ಎಲ್ಲ ವಿದ್ಯಾರ್ಥಿಗಳನ್ನು ಪರಿಣಾಮಕಾರಿಯಾಗಿ ತೊಡಗಿಸಬಹುದು.

**ಸದಾಕಾಲ ಬಳಸಬಹುದಾದ ಮಾರ್ಗಗಳು:**

- *ಉತ್ತಮ ವರ್ತನೆಗೆ ಮಾದರಿಯಾಗುವುದು*: ಎಲ್ಲ ವಿದ್ಯಾರ್ಥಿಗಳನ್ನು ಅವರ ಜನಾಂಗೀಯ ಗುಂಪು, ಧರ್ಮ ಅಥವಾ ಲಿಂಗವನ್ನು ಲೆಕ್ಕಿಸದೆ ಉತ್ತಮವಾಗಿ ನಡೆಸಿಕೊಳ್ಳುವುದಕ್ಕೆ ಉದಾಹರಣೆಯಾಗಿರಿ. ಎಲ್ಲ ವಿದ್ಯಾರ್ಥಿಗಳನ್ನು ಗೌರವದಿಂದ ಕಾಣಿರಿ ಹಾಗೂ ಎಲ್ಲರಿಗೂ ಸಮಾನವಾಗಿ ಬೆಲೆಕೊಡುವಿರೆಂಬುದನ್ನು ನಿಮ್ಮ ಪಾಠದ ಮೂಲಕ ಸ್ಪಷ್ಟಪಡಿಸಿ. ಅವರೊಂದಿಗೆ ಗೌರವದಿಂದ ಮಾತನಾಡಿ, ಸೂಕ್ತವಾಗಿದ್ದಾಗ ಅವರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಿ ಮತ್ತು ಎಲ್ಲರಿಗೂ ಪ್ರಯೋಜನಕ್ಕೆ  ಬರುವ ಕಾರ್ಯಗಳನ್ನು ನಿರ್ವಹಿಸುವ ಮೂಲಕ ತರಗತಿಯ ಜವಾಬ್ದಾರಿಗಳನ್ನು ನಿರ್ವಹಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ.
- *ಉನ್ನತ ನಿರೀಕ್ಷೆಗಳು*: ಸಾಮರ್ಥ್ಯವು ನಿಗದಿಪಡಿಸಿದುದಲ್ಲ; ಸೂಕ್ತವಾದ ಆಸರೆ ನೀಡಿದರೆ ಎಲ್ಲ ವಿದ್ಯಾರ್ಥಿಗಳು ಕಲಿಯಬಲ್ಲರು ಹಾಗೂ ಪ್ರಗತಿ ಹೊಂದಬಲ್ಲರು. ನಿಮ್ಮ ತರಗತಿಯಲ್ಲಿ ಯಾವುದೇ ವಿದ್ಯಾರ್ಥಿ ನೀವು ಮಾಡಿಸುತ್ತಿರುವ ಚಟುವಟಿಕೆಯನ್ನು ಅರ್ಥಮಾಡಿಕೊಳ್ಳಲು ಕಷ್ಟಪಟ್ಟರೆ, ಆ ವಿದ್ಯಾರ್ಥಿ ಎಂದಿಗೂ ಅರ್ಥಮಾಡಿಕೊಳ್ಳಲಾರನೆಂದು ಭಾವಿಸಬೇಡಿ. ಶಿಕ್ಷಕರಾಗಿ ನಿಮ್ಮ ಪಾತ್ರ ಪ್ರತಿ ವಿದ್ಯಾರ್ಥಿ ಕಲಿಯುವಂತೆ ಮಾಡಲು ಎಷ್ಟು ಉತ್ತಮವಾಗಿ ಕ್ರಮವಹಿಸಬೇಕೆಂಬುದಾಗಿದೆ. ನಿಮ್ಮ ತರಗತಿಯ ಪ್ರತಿಯೊಬ್ಬರ ಬಗ್ಗೆಯೂ ನಿಮಗೆ ಉನ್ನತ ನಿರೀಕ್ಷೆಗಳಿದ್ದರೆ, ನಿಮ್ಮ ವಿದ್ಯಾರ್ಥಿಗಳು ತಾವು ನಿರಂತರ ಪ್ರಯತ್ನದಿಂದ ಕಲಿಯಬಹುದೆಂದು ಭಾವಿಸುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ವರ್ತನೆಯ ಕುರಿತಾಗಿಯೂ ಉನ್ನತ ನಿರೀಕ್ಷೆಗಳಿರಬೇಕು. ನಿರೀಕ್ಷೆಗಳು ಸ್ಪಷ್ಟವಾಗಿರುವುದರ ಬಗ್ಗೆ ಹಾಗೂ ವಿದ್ಯಾರ್ಥಿಗಳು ಪರಸ್ಪರ ಗೌರವಿಸುವುದರ ಬಗ್ಗೆ ಖಚಿತಪಡಿಸಿಕೊಳ್ಳಿ.
- *ನಿಮ್ಮ ತರಗತಿಯಲ್ಲಿ ವೈವಿಧ್ಯತೆಯನ್ನು ನಿರ್ಮಿಸಿ*: ವಿದ್ಯಾರ್ಥಿಗಳು ಬೇರೆ ಬೇರೆ ವಿಧಾನಗಳಲ್ಲಿ ಕಲಿಯುತ್ತಾರೆ. ತಮ್ಮ ಐಡಿಯಾಗಳನ್ನು ವ್ಯಕ್ತಪಡಿಸುವುದಕ್ಕಾಗಿ ಕೆಲವರು ಬರೆಯಲು ಇಷ್ಟಪಡುತ್ತಾರೆ; ಇತರರು ಮನೋನಕ್ಷೆ (mind map), ಚಿತ್ರಗಳನ್ನು ಬಿಡಿಸಲು ಬಯಸುತ್ತಾರೆ. ಕೆಲವು ವಿದ್ಯಾರ್ಥಿಗಳು ಆಲಿಸುವುದರಲ್ಲಿ ಉತ್ತಮರು; ಕೆಲವರಿಗೆ ತಮ್ಮ ಐಡಿಯಾಗಳನ್ನು ಮಾತನಾಡುವ ಮೂಲಕ ವ್ಯಕ್ತಪಡಿಸಲು ಅವಕಾಶ ನೀಡಿದರೆ ಉತ್ತಮವಾಗಿ ಕಲಿಯುತ್ತಾರೆ. ನಿಮ್ಮ ಕ್ರಮ ಎಲ್ಲ ವಿದ್ಯಾರ್ಥಿಗಳಿಗೂ, ಎಲ್ಲ ಕಾಲಕ್ಕೂ ಹೊಂದಲಾರದು. ಆದರೆ ನಿಮ್ಮ ಬೋಧನೆಯಲ್ಲಿ ವೈವಿಧ್ಯತೆಯನ್ನು ಉಂಟುಮಾಡಿ, ವಿದ್ಯಾರ್ಥಿಗಳು ಕಲಿಕಾ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಒದಗಿಸಬಹುದು.
- *ಕಲಿಕೆಯನ್ನು ದೈನಂದಿನ ಜೀವನಕ್ಕೆ ಸಂಬಂಧೀಕರಿಸಿ*: ಕೆಲವು ವಿದ್ಯಾರ್ಥಿಗಳಿಗೆ, ನೀವು ಮಾಡಲು ತಿಳಿಸುವ ಕಲಿಕಾ ಚಟುವಟಿಕೆಗಳು ಅವರ ದಿನನಿತ್ಯದ ಜೀವನಕ್ಕೆ ಸಂಬಂಧಪಟ್ಟಿಲ್ಲವೆನಿಸಬಹುದು. ಅಂತಹ ಸಂದರ್ಭಗಳಲ್ಲಿ ನೀವು ಸಾಧ್ಯವಿರುವೆಡೆಯೆಲ್ಲಾ ವಿದ್ಯಾರ್ಥಿಗಳ ಸ್ವಂತ ಅನುಭವಗಳಿಂದ ಉದಾಹರಣೆಗಳನ್ನು ಬಳಸಿ ಕಲಿಕೆಗೆ ಸಂಬಂಧೀಕರಿಸುವ ಮೂಲಕ ಸ್ಪಂದಿಸಬಹುದು.
- *ಭಾಷೆಯ ಬಳಕೆ*: ನೀವು ಬಳಸುವ ಭಾಷಯ ಬಗ್ಗೆ ಜಾಗರೂಕತೆಯಿಂದ ಯೋಚಿಸಿ. ಧನಾತ್ಮಕವಾಗಿ ಭಾಷೆಯ ಬಳಕೆ ಮಾಡಿ, ಪ್ರಶಂಸಿಸಿ ಹಾಗೂ ವಿದ್ಯಾರ್ಥಿಗಳನ್ನು ಅಪಹಾಸ್ಯ ಮಾಡಬೇಡಿ. ವಿದ್ಯಾರ್ಥಿಗಳ ವರ್ತನೆಯನ್ನು ಟೀಕಿಸಿ; ಅವರನ್ನು ಕುರಿತಲ್ಲ. 'ನೀನು ಈ ದಿನ ನನಗೆ ಕಿರಿಕಿರಿ ಉಂಟುಮಾಡುತ್ತಿರುವೆ' ಎಂಬುದು ಬಹಳ ವೈಯಕ್ತಿಕವಾದ ಟೀಕೆ. ಬದಲಾಗಿ, 'ಈ ದಿನ ನಿನ್ನ ವರ್ತನೆ ಕಿರಿಕಿರಿ ಉಂಟುಮಾಡುವಂತಿದೆ. ನಿನ್ನ ಗಮನ ಕೇಂದ್ರಿಕರಿಸಲು ಕಷ್ಟವಾಗುತ್ತಿರುವುದಕ್ಕೆ ಏನಾದರೂ ಕಾರಣವಿದೆಯೇ?' ಎಂದು ಹೇಳುವುದು ಉತ್ತಮವಾದುದು ಹಾಗೂ ಹೆಚ್ಚು ಸಹಾಯ ಮಾಡುವಂತಹುದಾಗಿದೆ.

- *ಏಕಪ್ರಕಾರದ ಸವಾಲುಗಳು:* ಹೆಣ್ಣು ಮಕ್ಕಳನ್ನು ಏಕಪ್ರಕಾರವಲ್ಲದ ಪಾತ್ರಗಳಲ್ಲಿ ಗುರುತಿಸುವ ಸಂಪನ್ಮೂಲಗಳನ್ನು ಬಳಸಿ ಅಥವಾ ಶಾಲೆಗೆ ಮಹಿಳಾ ವಿಜ್ಞಾನಿಯಂತಹ ಮಾದರಿ ವ್ಯಕ್ತಿಗಳನ್ನು ಆಹ್ವಾನಿಸಿ, ನಿಮ್ಮ ಸ್ವಂತ ಲಿಂಗ ಏಕಪ್ರಕಾರದ ಬಗ್ಗೆ ಜಾಗೃತವಾಗಿರಿ; ಹೆಣ್ಣು ಮಕ್ಕಳು ಕ್ರೀಡೆಗಳಲ್ಲಿ ಭಾಗವಹಿಸುತ್ತಾರೆ ಹಾಗೂ ಗಂಡು ಮಕ್ಕಳು ಕಾಳಜಿ ವಹಿಸುತ್ತಾರೆ ಎಂಬುದು ನಮಗೆ ತಿಳಿದಿದ್ದರೂ ವ್ಯಕ್ತಪಡಿಸುವ ರೀತಿಯಲ್ಲಿ ವ್ಯತ್ಯಾಸ ಮಾಡುತ್ತೇವೆ. ಇದಕ್ಕೆ ಕಾರಣ ಸಮಾಜದಲ್ಲಿ ಈ ಕುರಿತು ನಾವು ಮಾತನಾಡುವ ರೀತಿಯಲ್ಲಿ ವ್ಯತ್ಯಾಸವಿರುವುದನ್ನು ರೂಢಿಸಿಕೊಂಡಿರುವುದು.

**ಸುಭದ್ರವಾದ ಹಾಗೂ ಸ್ವಾಗತಿಸುವ ಕಲಿಕಾ ವಾತಾವರಣ ಸೃಷ್ಟಿಸಿ.**

ಶಾಲೆಯು ಎಲ್ಲ ವಿದ್ಯಾರ್ಥಿಗಳಿಗೂ ಸುಭದ್ರ ಹಾಗೂ ಸ್ವಾಗತಾರ್ಹವಾಗಿರಬೇಕು. ಪ್ರತಿಯೊಬ್ಬರೂ ಪರಸ್ಪರ ಸ್ನೇಹ ಹಾಗೂ ಗೌರವದಿಂದಿರಲು ಪ್ರೋತ್ಸಾಹಿಸುವ ಮೂಲಕ ನಿಮ್ಮ ವಿದ್ಯಾರ್ಥಿಗಳು ಸ್ವಾಗತಿಸಲ್ಪಡುವಂತೆ ಮಾಡಲು ನೀವು ಸಮರ್ಥರಿದ್ದೀರಿ. ವಿಭಿನ್ನ ವಿದ್ಯಾರ್ಥಿಗಳಿಗೆ ಶಾಲೆ ಹಾಗೂ ತರಗತಿಯು ಹೇಗೆ ಕಾಣಬಹುದು ಮತ್ತು ಹೇಗೆ ಅನಿಸಬಹುದೆಂದು ಯೋಚಿಸಿ. ವಿದ್ಯಾರ್ಥಿಗಳು ಕುಳಿತುಕೊಳ್ಳುವ ವ್ಯವಸ್ಥೆಯ ಕುರಿತು ಯೋಚಿಸಿ. ದೈಹಿಕ, ಶ್ರವಣ, ದೃಷ್ಟಿ ಸಮಸ್ಯೆಯುಳ್ಳವರಿಗೆ ಪಾಠವನ್ನು ತಲುಪಲು ಅವಕಾಶವಿರುವೆಡೆ ಕುಳಿತುಕೊಳ್ಳಲು ವ್ಯವಸ್ಥೆ ಮಾಡಿ. ನಾಚಿಕೆ ಸ್ವಭಾವದವರು ಹಾಗೂ ಸುಲಭವಾಗಿ ಗಮನ ಬೇರೆಡೆಗೆ ಹರಿಸುವ ವಿದ್ಯಾರ್ಥಿಗಳನ್ನು ಗುರುತಿಸಿ ಅವರನ್ನು ಸುಲಭವಾಗಿ ಹೇಗೆ ತೊಡಗಿಸುವಂತೆ ಮಾಡಬಹುದೆಂಬುದನ್ನು ಪರಿಶೀಲಿಸಿ.

**ನಿರ್ದಿಷ್ಟ ಬೋಧನಾ ಮಾರ್ಗಗಳು**:

ಎಲ್ಲ ವಿದ್ಯಾರ್ಥಿಗಳನ್ನು ತೊಡಗಿಸಲು ನಿಮಗೆ ಸಹಾಯಕವಾಗುವ ಹಲವಾರು ನಿರ್ದಿಷ್ಟ ಮಾರ್ಗಗಳಿವೆ. ಈ ಕುರಿತು ಇತರ ಪ್ರಮುಖ ಸಂಪನ್ಮೂಲಗಳಲ್ಲಿ ಚರ್ಚಿಸಲಾಗಿದ್ದು, ಇಲ್ಲಿ ಸಂಕ್ಷಿಪ್ತ ಪರಿಚಯವನ್ನು ನೀಡಲಾಗಿದೆ.

- *ಪ್ರಶ್ನಿಸುವಿಕೆ:* ವಿದ್ಯಾರ್ಥಿಗಳನ್ನು ನೀವು ಕೈಮೇಲೆ ಮಾಡುವಂತೆ ತಿಳಿಸಿದರೆ, ಪ್ರತಿ ಬಾರಿ ಅದೇ ವಿದ್ಯಾರ್ಥಿಗಳು ಉತ್ತರಿಸಲು ಮುಂದಾಗುತ್ತಾರೆ.ಪ್ರಶ್ನೆಗಳಿಗೆ ಪ್ರತಿಕ್ರಿಯಿಸುವಂತೆ ಹಾಗೂ ಉತ್ತರಗಳ ಬಗ್ಗೆ ಯೋಚಿಸುವಂತೆ ಹೆಚ್ಚು ವಿದ್ಯಾರ್ಥಿಗಳನ್ನು ತೊಡಗಿಸಲು ಇತರ ಮಾರ್ಗಗಳಿವೆ. ನೀವು ನಿರ್ದಿಷ್ಟವಾಗಿ ಪ್ರಶ್ನಿಸಬಹುದು. ಉತ್ತರಿಸಬೇಕಾದವರು ಯಾರೆಂಬುದನ್ನು ನೀವು ತೀರ್ಮಾನಿಸುವುದಾಗಿ ಇಡೀ ತರಗತಿಗೆ ತಿಳಿಸಿ;ನಂತರ ತರಗತಿಯಲ್ಲಿ ಮುಂದಿನ ಸಾಲಿನಲ್ಲಿ ಕುಳಿತವರ ಬದಲು, ಹಿಂದಿನ ಸಾಲುಗಳಲ್ಲಿ, ಗೋಡೆಯ ಬದಿಗಳಲ್ಲಿ ಕುಳಿತಿರುವವರನ್ನು ಪ್ರಶ್ನಿಸಿ. ವಿದ್ಯಾರ್ಥಿಗಳಿಗೆ 'ಆಲೋಚಿಸಲು ಸಮಯ' ಕೊಡಿ. ನಿರ್ದಿಷ್ಟ ವಿದ್ಯಾರ್ಥಿಗಳಿಂದ ಭಾಗವಹಿಸುವಿಕೆಯನ್ನು ಆಹ್ವಾನಿಸಿ. ಆತ್ಮವಿಶ್ವಾಸವನ್ನು ಬೆಳೆಸಲು ಜೋಡಿ ಅಥವಾ ಗುಂಪು ಕಾರ್ಯವನ್ನು ಬಳಸಿ, ಆ ಮೂಲಕ ಪ್ರತಿಯೊಬ್ಬರನ್ನು ಇಡೀ ತರಗತಿ ಚರ್ಚೆಗಳಲ್ಲಿ ತೊಡಗಿಸಬಹುದು.
- *ಮೌಲ್ಯಮಾಪನ:* ಪ್ರತಿಯೊಬ್ಬ ವಿದ್ಯಾರ್ಥಿಯನ್ನು ನೀವು ಉತ್ತಮವಾಗಿ ತಿಳಿಯಲು ಸಹಾಯ ಮಾಡುವ ರೂಪಾಣಾತ್ಮಕ ಮೌಲ್ಯಮಾಪನದ ವಿವಿಧ ತಂತ್ರಗಳನ್ನು ಸಿದ್ಧಪಡಿಸಿಕೊಳ್ಳಿ. ವಿದ್ಯಾರ್ಥಿಗಳಲ್ಲಿ ಅಡಗಿರುವ ಸಾಮರ್ಥ್ಯಗಳು ಹಾಗೂ ಕೊರತೆಗಳನ್ನು ಹೊರತರಲು ನೀವು ಸಾಮರ್ಥ್ಯಗಳ ಬಗ್ಗೆ ಸಾಮಾನ್ಯೀಕರಿಸಿದ ಅಭಿಪ್ರಾಯಗಳಿಂದ ಸುಲಭವಾಗಿ ಗುರುತಿಸಬಹುದಾದ ಅನಿಸಿಕೆಗಳಿಗಿಂತ ರೂಪಣಾತ್ಮಕ ಮೌಲ್ಯಮಾಪನವು ನಿಖರವಾದ ಮಾಹಿತಿಯನ್ನು ಒದಗಿಸುತ್ತದೆ. ಈ ರೀತಿ ಮಾಡುವುದರಿಂದ ನೀವು ವಿದ್ಯಾರ್ಥಿಗಳ ವೈಯಕ್ತಿಕ ಅಗತ್ಯತೆಗಳಿಗೆ ಪ್ರತಿಕ್ರಿಯಿಸಲು ಸಮರ್ಥರಾಗುವಿರಿ
- *ಗುಂಪುಕೆಲಸ ಹಾಗೂ ಜೋಡಿ ಕೆಲಸ*: ನಿಮ್ಮ ತರಗತಿಯನ್ನು ಗುಂಪುಗಳಾಗಿ ವಿಭಾಗಿಸುವ ಬಗ್ಗೆ ಹಾಗೂ ಜೋಡಿಗಳನ್ನು ರಚಿಸುವ ವಿಧಾನದ ಬಗ್ಗೆ ಜಾಗರೂಕವಾಗಿ ಯೋಚಿಸಿ. ಎಲ್ಲರನ್ನೂ ತೊಡಗಿಸಿಕೊಳ್ಳುವ ಹಾಗೂ ಒಬ್ಬರು ಮತ್ತೊಬ್ಬರಿಗೆ ಬೆಲೆ ಕೊಡುವುದನ್ನು ಪ್ರೋತ್ಸಾಹಿಸುವ ಗುರಿ ಸಾಧನೆಯ ದೃಷ್ಟಿಯಿಂದ, ಎಲ್ಲ ವಿದ್ಯಾರ್ಥಿಗಳು ಪರಸ್ಪರ ಕಲಿಯಲು ಅವಕಾಶವಿರುವ ಬಗ್ಗೆ ಹಾಗೂ ತಮಗೆ ತಿಳಿದಿರುವ ಕುರಿತು ಆತ್ಮವಿಶ್ವಾಸ ಬೆಳೆಸಿಕೊಳ್ಳುವ ಬಗ್ಗೆ ಖಾತ್ರಿಪಡಿಸಿಕೊಳ್ಳಿ. ಕೆಲವು ವಿದ್ಯಾರ್ಥಿಗಳು ಸಣ್ಣಗುಂಪುಗಳಲ್ಲಿ ಪ್ರಶ್ನೆಗಳನ್ನು ಕೇಳಲು ಹಾಗೂ ತಮ್ಮ ಐಡಿಯಾಗಳನ್ನು ವ್ಯಕ್ತಪಡಿಸಲು ಆತ್ಮವಿಶ್ವಾಸ ಹೊಂದಿರುತ್ತಾರೆ. ಆದರೆ ಇಡೀ ತರಗತಿಯ ಮುಂದೆ ಹೇಳಲು ಸಾಧ್ಯವಾಗದಿರಬಹುದು.
- *ವಿಭೇದಿಕರಿಸುವುದು:* ವಿವಿಧ ಗುಂಪುಗಳಿಗೆ ವಿವಿಧ ಕಾರ್ಯಗಳನ್ನು ಹಂಚುವುದರಿಂದ ವಿದ್ಯಾರ್ಥಿಗಳಿಗೆ ತಾವು ಇರುವ ಹಂತದಿಂದ ಆರಂಭಿಸಿ, ಮುಂದುವರೆಸಲು ಸಾಧ್ಯವಾಗುತ್ತದೆ. ಮುಕ್ತಾಂತ ಕಾರ್ಯಗಳನ್ನು (open-ended tasks) ನೀಡುವುದರಿಂದ ವಿದ್ಯಾರ್ಥಿಗಳಿಗೆ ಯಶಸ್ಸು ನಿರ್ವಹಿಸಬೇಕಾದ ಕಾರ್ಯಗಳಲ್ಲಿ ಆಯ್ಕೆ ನೀಡಿದಾಗ ಅವರ ಕಾರ್ಯದ ಕುರಿತು ಮಾಲೀಕತ್ವ ಭಾವನೆ ಮಾಡುವುದಲ್ಲದೆ, ತಮ್ಮ ಕಲಿಕೆಗೆ ತಾವೇ ಜವಾಬ್ದಾರರಾಗಲು ಸಹಾಯವಾಗುತ್ತದೆ. ವಿಶೇಷವಾಗಿ, ದೊಡ್ಡ ತರಗತಿಗಳಲ್ಲಿ,

ಪ್ರತಿಯೊಬ್ಬರ ಕಲಿಕೆಯ ಅಗತ್ಯತೆಗಳನ್ನು ಗುರುತಿಸುವುದು ಕಷ್ಟ. ಆದರೆ ವಿವಿಧ ಕಾರ್ಯಗಳು ಹಾಗೂ ಚಟುವಟಿಕೆಗಳನ್ನು ಬಳಸುವ ಮೂಲಕ ಸಾಧ್ಯವಾಗುತ್ತದೆ.

## ಹೆಚ್ಚುವರಿ ಸಂಪನ್ಮೂಲಗಳು

- 'Learning about rights in Year 2': http://globaldimension.org.uk/pages/8668
- National Policy on Education (1986 and 1992): http://www.childlineindia.org.in/pdf/National-Policy-on-Education.pdf
- National Curriculum for Elementary and Secondary Education (1988): http://www.teindia.nic.in/mhrd/50yrsedu/q/91/HL/toc.htm
- UNESCO language studies: http://www.unesco.org/education/tlsf/mods/theme_b/popups/mod06t04s04.html
- *Right Here, Right Now: Teaching Citizenship through Human Rights*, published by the UK Ministry of Justice, the British Institute of Human Rights, the UK Department for Children, Schools and Families, and Amnesty International UK: http://www.amnesty.org.uk/sites/default/files/book_-_right_here_right_now_0.pdf
- 'Language across curriculum' by Nisha Butoliya: http://www.teachersofindia.org/en/lesson-plan/language-across-curriculum
- UNICEF India: http://www.unicef.org/india/wes.html
- 'What is academic language?' by James Paul Gee, which includes further discussion of the issues raised in the introduction: http://www.jamespaulgee.com/sites/default/files/pub/TeachingSciencetoELL-Ch07.pdf
- *Democratic Citizenship, Languages, Diversity and Human Rights* by Hugh Starkey: https://www.coe.int/t/dg4/linguistic/Source/StarkeyEN.pdf

## ಪರಾಮರ್ಶನ ಗ್ರಂಥಗಳು/ಗ್ರಂಥಸೂಚಿ

Home Department, Govt of Bihar (undated) 'Fundamental Duties of the Citizens of India as per the Constitution of India' (online). Available from: http://home.bih.nic.in/Citizen_Guidelines/fundamental_duties_of_citizen.htm (accessed 29 October 2014).

Malone, S. (2010) *Activities for Early Grades of Mother Tongue (L1)-Based Multilingual Education Programs*. Dallas, TX: SIL International.

### Acknowledgements

Except for third party materials and otherwise stated below, this content is made available under a Creative Commons Attribution-ShareAlike licence (http://creativecommons.org/licenses/by-sa/3.0/). The material acknowledged below is Proprietary and used under licence for this project, and not subject to the Creative Commons Licence. This means that this material may only be used unadapted within the TESS-India project and not in any subsequent OER versions. This includes the use of the TESS-India, OU and UKAID logos.

Grateful acknowledgement is made to the following sources for permission to reproduce the material in this unit:

Figure 1: http://ww.ifrc.org.

Figure 3: top left, adapted from 'Child growth stats show half of india's children are chronically malnourished', Pratul Sharma, 7 October 2012, Mail Online India, http://www.dailymail.co.uk; top right, http://www.saferinindia.org; bottom left, http://happy-2013.blogspot.com/2014/05/; bottom right, http://www.pakool.com.

Figure 4: top left, http://www.childlineindia.org.in; top middle, http://newswatch.nationalgeographic.com; right, http://ncert.nic.in; bottom left, http://www.kidsfortigers.org; bottom right, AFP=JIJI http://www.jijiphoto.jp.

Resource 1: http://home.bih.nic.in.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.